ಮಂತ್ರಿಯುವರಿಂದ ಹೇಳಿಕೆ

ಕಿಂಕೋ ಕಾರ್ಖಾನೆಗೆ ಸಾರಿಗೆ ಸಂಸ್ಥೆಯ ಮೂಲ ಪ್ರೋತ್ಸಾಹ.

SRI AZEEZ SAIT (Minister for Transport and Wakf): Sir, I may be permitted to make the statement to set right the records.

Sir, on 22-3-91, in the Legislative Assembly the Hob'ble Minister of State for Labour while answering the calling attention notice of the hon.member Sri K.H. Hanume Gowda, MLA, Hassan, stated that KSRTC is providing adequate support to the KIMCO. He pointed out that KSRTC is providing 8 vehicles annually for bus body building along with the advance payment which is totally insufficient. The hon.member Sri. P.G.R. Sindhia stated that if 200 chassis are given out 1200 chassis to KIMCO, things would be alright.

As on today there are as many as 49 chassis for body building and 17 vehicles for heavy accident repairs. In the month of March upto 22nd, only one vehicle is being delivered by KIMCO. 17 Vehicles .which are sent for heavy accident repairs are in KIMCO since June 90. A true and correct picture was not being presented. The number of vehicles for which KIMCO has built the bodies is as follows:

	No. of vehicles
1984-85	3
1985-86	41
1986-87	188
1987-88	241
1988-89	291
1989-90	320
1990-91	110

The KIMCO is due to KSRTC a sum of Rs. 1.40 crore are on today.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ (ಮುಂದುವರೆದುದು)

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದ ಆಯವ್ಯಯವನ್ನು ಮಂಡಿಸಿರುವ ಬಗ್ಗೆ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದಿಸಿ ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯವಾಗಿ ಇವತ್ತಿನ ಒಂದು ರಾಷ್ಟ್ರೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ನಾವು ವಿಚಾರವನ್ನು ಮಾಡಿದಾಗ ನಮ್ಮ ರಾಜ್ಯದ ಮತ್ತು ರಾಷ್ಟ್ರದ ಹಣಕಾಸಿನ ಪರಿಸ್ಥಿತಿ ಬಹಳ ದುಸ್ಥಿತಿಯಲ್ಲಿದೆ ಎಂಬುದನ್ನು ನಾವೆಲ್ಲರೂ ಸಹಿತ ಒಪ್ಪಿಕೊಳ್ಳಬೇಕಾಗಿದೆ. ಆದರೆ ಪ್ರಚಲಿತ ರಾಜಕಾರಣದಲ್ಲಿ

ನಾವು ಕೇವಲ ಓಟಿನ ಆಸೆಯಿಂದ ವಸ್ತು ಸ್ಥಿತಿಯನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತೇವೆಯೆಂದು ನನಗಾದರೂ ಅನ್ನಿಸುವುದಕ್ಕೆ ಪ್ರಾರಂಭವಾಗಿದೆ. ನಾವು ಇವತ್ತು ಯಾವುದೇ ಒಬ್ಬ ಅಧಿಕಾರಿಯ ಹತ್ತಿರ ಹೋದಾಗ ಅಥವಾ ಮಂತ್ರಿಗಳ ಹತ್ತಿರ ಹೋದಾಗ ಸ್ವಾಭಾವಿಕವಾಗಿ ಬರತಕ್ಕಂಥ ಉತ್ತರ ಏನೆಂದರೆ, ಹಣ ಬಂದಾಗ ಇದನ್ನು ಮಾಡುತ್ತೇವೆ ಎಂದು ಉತ್ತರ ಬರುತ್ತದೆ.

ನಮ್ಮ ಕಾಲದಲ್ಲಿಯೂ ಸಹಿತ 1986-87ರ ನಂತರ ಇದೇ ಮಾತನ್ನು ನಾವು ಹೇಳಿಕೊಂಡು ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಕೇವಲ ನಮ್ಮ ರಾಜ್ಯದ್ದು ಅಷ್ಟೇ ಅಲ್ಲ, ರಾಷ್ಟ್ರದ ಪರಿಸ್ಥಿತಿ ಸಹಿತ, ಹಣಕಾಸಿನ ವಿಷಯದಲ್ಲಿ ಈ ಡೆತ್ ಟ್ರಾಪ್ ಎಂದು ಏನು ಹೇಳುತ್ತಾರೆ, ಅದರ ಹತ್ತಿರ ಹತ್ತಿರ ಹೋಗುತ್ತಿದ್ದೇವೆ ಎಂದು ನನಗನ್ನಿಸುತ್ತದೆ. ಅಡಿಷನಲ್ ರಿಸೋರ್ಸಸ್ ಮೊಬಲೈಸೇಶನ್ ಮಾಡಲಿಕ್ಕೆ ಸರ್ಕಾರದ ಹಣಕಾಸು ಸೋರಿಹೋಗದಂತೆ ಬಿಗಿ ಮಾಡುವುದಕ್ಕೆ ಇವತ್ತಿನ ಸರ್ಕಾರಗಳಿಗೆ ಒಂದು ಪೊಲಿಟಿಕಲ್ ವಿಲ್ ಎಂದು ಏನು ಹೇಳುತ್ತಾರೆ, ಅಥವಾ ಸ್ಟ್ರಾಂಗ್ ಕನ್ವಿಕ್ಷನ್ಸ್ ಏನು ಬೇಕಾಗಿದೆ ಅದು ನಮ್ಮಲ್ಲಿ ಯಾರಲ್ಲೂ ಸಹಿತ ಇಲ್ಲವೆಂದು ನಾವು ಹೇಳಬೇಕಾಗಿದೆ. ಮತದಾರರನ್ನು ಸಂತೋಷಗೊಳಿಸುವ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ ಇವತ್ತಿನ ಪರಿಸ್ಥಿತಿ ಬಹಳ ಗಂಭೀರವಾಗಿ, ಪ್ರತಿ ದಿನ ಸಹ ಆಗುತ್ತಿದೆ. ನಾವೆಲ್ಲರೂ ಇದರ ಬಗ್ಗೆ ನಮ್ಮ ಪಕ್ಷಭೇದವನ್ನು ಮರೆತು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸರಿಗಟ್ಟಲಿಕ್ಕೆ ಪ್ರಯತ್ನ ಮಾಡದೇ ಹೋದರೆ ಬಹುಶಃ ಇನ್ನೂ ಕೆಟ್ಟ ಪರಿಸ್ಥಿತಿ ಕರ್ನಾಟಕ ರಾಜ್ಯಕ್ಕೆ ಕಾದಿದೆ ಎಂದು ಹೇಳಿದರೆ ಅದು ಈ ಸಂದರ್ಭದಲ್ಲಿ ಔಚಿತ್ಯವಾದದ್ದು ಎಂದು ನಾನಾದರೂ ತಿಳಿದಿದ್ದೇನೆ. ಉದಾಹರಣೆಗೆ ಕಾವೇರಿ ಯೋಜನೆಗಳನ್ನು ಮುಗಿಸಬೇಕು. ಬಚಾವತ್ ಅವಾರ್ಡ್‌ನ ಪ್ರಕಾರ ಕೃಷ್ಣಾ ಯೋಜನೆಗಳನ್ನು ಮುಗಿಸಬೇಕು. ಇದಕ್ಕೆಲ್ಲಾ ಹಣ ಎಲ್ಲಿಂದ ತರತಕ್ಕದ್ದು?

ನಾವು ಇದ್ದಾಗ ಸಹಿತ ರಾಜಕೀಯ ಲೇಪನದ ಭಾಷಣಗಳು ಇದರ ಬಗ್ಗೆ ಆಗಿದೆ. ಈ ರೀತಿ ದುಡ್ಡು ಬರಲಿಲ್ಲ, ಮತ್ತೊಂದು ಬರಲಿಲ್ಲವೆಂದು ಹೇಳಿ ಕೇವಲ ರಾಜಕೀಯವನ್ನು ಬೆರೆಸಿರುವುದರಿಂದ ಸರ್ಕಾರಗಳು ಸಹಿತ ಉರುಳಿ ಹೋಗಿರತಕ್ಕಂಥಾದ್ದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೆ ವಸ್ತು ಸ್ಥಿತಿಯಲ್ಲಿ ಹಣ ತರತಕ್ಕದ್ದು ಎಲ್ಲಿಂದ? ಕೇವಲ ಪರಸ್ಪರ ದೋಷಾರೋಪಣೆ ಮಾಡುವುದರಿಂದ ಇದು ಸಾಧ್ಯವೇ? ಮೊನ್ನೆ ವೀರೇಂದ್ರ ಪಾಟೀಲರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಹೇಳಿದರು? ಜನತಾದಳದ ಸರ್ಕಾರದಲ್ಲಿ ಎಲ್ಲಾ ಹಣ ಸೋರಿಹೋಗುತ್ತಿತ್ತು. ಅದು ಯಾರ ಜೇಬಿಗೆ ಹೋಗುತ್ತಿತ್ತು ಎನ್ನುವುದು ಗೊತ್ತಿಲ್ಲ, ಅಂತೂ ಒಬ್ಬರ ಜೇಬಿಗೆ ಹೋಗುತ್ತಿತ್ತು ಎಂದು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿದ್ದಾರೆ. ಆದರೆ ಈಗ ನಾನು ಕೇಳುತ್ತೇನೆ, ನಾವು ಅಧಿಕಾರ ಬಿಟ್ಟು ಎರಡು ವರ್ಷಗಳಾಗಿ ಅನೇಕ ಗೌರವಾನ್ವಿತ ಸದಸ್ಯರು ಹೊಸದಾಗಿ ಗೆದ್ದು ಬಂದಿದ್ದು, ಅವರು ಅನೇಕ ರೀತಿಯ ವಿಚಾರಗಳನ್ನು ವಿಶ್ಲೇಷಣೆ ಮಾಡುತ್ತಾರೆ. ನಾವು ಖಜಾನೆ ಖಾಲಿ ಮಾಡಿದ್ದೆವು ಎಂಬ ಮಾತನ್ನೂ ಸಹ ಹೇಳಿದ್ದಾರೆ. ಈಗ ಎರಡು ವರ್ಷಗಳಲ್ಲಿ ನಮ್ಮ ರಾಜ್ಯ ಸರ್ಕಾರ ಅಂತೂ ಇಲ್ಲ, ರಾಜ್ಯಪಾಲರ ಆಡಳಿತ ಆಯಿತು. ನಿಮಗೆ ಬೇಕಾದಂಥ ರಾಜ್ಯಪಾಲರು ಆದಮೇಲೆ ನಿಮ್ಮ ಪಕ್ಷದ ಸರ್ಕಾರ ಬಂತು. ಆದರೆ ಇವತ್ತು ಫೈನಾನ್ಶಿಯಲ್ ಡಿಸಿಪ್ಲೀನ್ ತರುವುದಕ್ಕೆ ಏನು ಪ್ರಯತ್ನ ಆಗಿದೆ? ಫೈನಾನ್ಶಿಯಲ್ ಡಿಸಿಪ್ಲೀನ್ ತರಲಿಕ್ಕೆ ಯಾವುದೇ ರೀತಿಯ ಪ್ರಯತ್ನವನ್ನು ತಾವು ಮಾಡಿಲ್ಲವೆಂಬುದನ್ನು ಬಹಳ ದುಃಖದಿಂದ ನಾನು ಹೇಳಬೇಕಾಗಿದೆ. ಮತ್ತು ಈ ಬಜೆಟ್‌ನ್ನು ಓದಿದಾಗ ಅಂತಹ ಯಾವುದೇ ಪ್ರಯತ್ನವೂ ಸಹ ಆಗಿದೆ ಎಂದು ನನಗನಿಸುವುದಿಲ್ಲ. ನಮ್ಮ ಬಂಗಾರಪ್ಪನವರು ಸಮಾಜವಾದಿ ಹಿನ್ನೆಲೆಯ ವಾತಾವರಣದಲ್ಲಿ ಬೆಳೆದವರು. ಇವತ್ತು ಆಕಸ್ಮಿಕವಾಗಿ ಮುಖ್ಯಮಂತ್ರಿಗಳಾಗಿದ್ದಾರೆ.

ಏಕೆಂದರೆ ಕಳೆದ ಚುನಾವಣೆಗೆ ಮುಂಚೆ ವೀರೇಂದ್ರ ಪಾಟೀಲರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡುತ್ತೇವೆಂದು ಹೇಳಿದಿರಿ. ಆದಾದ ನಂತರ ಬದಲಾವಣೆ ಮಾಡಿದ್ದೀರಿ, ಇದು ನಿಮ್ಮ ಪಕ್ಷದ ವಿಚಾರ. ಆಕಸ್ಮಿಕವಾಗಿ ಆಗಿರತಕ್ಕ ಮುಖ್ಯ ಮಂತ್ರಿಗಳು, ಈ ಅವಕಾಶವನ್ನು ಉಪಯೋಗಿಸಿಕೊಂಡು, ಸಮಾಜವಾದಿ ತತ್ವವನ್ನು ಏನಾದರೂ ಬಜೆಟ್‌ನಲ್ಲಿ ಅಳವಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆಂದರೆ, ಕೇವಲ ಘೋಷಣೆಗಳ ರೂಪದಲ್ಲಿ ಆಗಿರತಕ್ಕಂಥಾದ್ದು ಮತ್ತು ವಿಧಾನ ಸಭೆಯ ಇತಿಹಾಸದಲ್ಲಿಯೇ ಈ 90 ಪುಟಗಳ ಆಯವ್ಯಯವನ್ನು ಮುಂಡಿಸಿರತಕ್ಕ ಯಾವ ಒಬ್ಬ ಹಣಕಾಸಿನ ಮಂತ್ರಿಗಳೂ ಇಲ್ಲವೆಂದು ಹೇಳಬೇಕಾಗಿದೆ. ಇದರಲ್ಲಿ ಯಾವುದೇ ಕಾರ್ಯಕ್ರಮ ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳು ಇವೆ, ಉದಾಹರಣೆಗೆ, "ಅಕ್ಷಯ" ಕಾರ್ಯಕ್ರಮ. ಮಕ್ಕಳಿಗೆ ಮಧ್ಯಾಹ್ನದ ಹೊತ್ತು ಆಹಾರವನ್ನು ಕೊಡುವುದು. ಗ್ರಾಮೀಣ ಪ್ರದೇಶದ ಬಡವರ ಮತ್ತು ಪಟ್ಟಣ ಪ್ರದೇಶದಲ್ಲಿರತಕ್ಕ ಬಡವರ ಪರಿಸ್ಥಿತಿ ನೋಡಿದಾಗ, ಇದು ಬೇಕು ಎಂದು ಅನಿಸುತ್ತದೆ. ಆದರೆ ಇದಕ್ಕೆ ಇಟ್ಟಿರತಕ್ಕ ಹಣ ಕೇವಲ 20 ಕೋಟಿ ರೂಪಾಯಿ. ನಾನು ಇದನ್ನು ವಿರೋಧ ಮಾಡುವುದಿಲ್ಲ, ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಏಕೆ ಆಕ್ಷೇಪಣೆ ವ್ಯಕ್ತಪಡಿಸುತ್ತೇನೆ. ಏಕೆ ವಿರೋಧ ಮಾಡುತ್ತೇನೆ ಎಂದರೆ, ಇಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಇದ್ದಾಗ, ಪುಸ್ತಕ ಕೊಡತಕ್ಕ, ಬಟ್ಟೆ ಕೊಡತಕ್ಕ, ಕಾರ್ಯಕ್ರಮವನ್ನು ಪ್ರಾರಂಭ ಮಾಡಿದೆವು.

ಆಗ ಇದರ ಬಗ್ಗೆ ಬಹಳ ಟೀಕೆ ನಡೆಯಿತು, ಬಹಳ ದೊಡ್ಡ ಟೀಕೆ ಆಯಿತು. ಇದು ಕೇವಲ ಚೀಪ್ ಗಿಮಿಕ್ಸ್ ಎನ್ನುವ ಮಾತನ್ನೂ ಈ ಸದನದಲ್ಲಿ ಕೇಳಿದ್ದೇವೆ. ಆಶ್ರಯ, ವಿಶ್ವ ಎನ್ನುವ ಕಾರ್ಯಕ್ರಮಗಳು, ವಿಶ್ವ ಮಾನವನ ವಾದವನ್ನು ಅಂದರೆ, ಸಮತಾವಾದವನ್ನು ತರುವ ದೃಷ್ಟಿಯಿಂದ ಪ್ರದೇಶದಲ್ಲಿರತಕ್ಕ ಕುಶಲ ಕರ್ಮಿಗಳಿಗೆ, ಬಡವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಕಾಟೇಜ್ ಇಂಡಸ್ಟ್ರೀಗೆ "ವಿಶ್ವ" ಎನ್ನತಕ್ಕ ದೊಡ್ಡ ಹೆಸರು ಕೊಟ್ಟಿದ್ದಾರೆ, ಮುಖ್ಯಮಂತ್ರಿಗಳಿಗೆ ಯಾರೋ ಬಹಳ ಚೆನ್ನಾಗಿ ಅಡ್ವೈಸ್ ಮಾಡಿದ್ದಾರೆ. ಆದರೆ ಇದಕ್ಕೆ ಎಷ್ಟು ದುಡ್ಡು ಇಟ್ಟಿದ್ದಾರೆ? ಇದಕ್ಕೆ ದುಡ್ಡೇ ಇಟ್ಟಿಲ್ಲ ನಾನು ಈ ಕಾರ್ಯಕ್ರಮವನ್ನು ಸ್ವಾಗತ ಮಾಡುತ್ತೇನೆ, ಇದರ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ಆದರೆ ಇದಕ್ಕೆ ಎಷ್ಟು ದುಡ್ಡು ಇಟ್ಟಿದ್ದಾರೆ, ಇದಕ್ಕೆ ತಿರುಪತಿ ನಾಮ! ಮತ್ತೆ "ಶುಶ್ರೂಷಾ" ಎನ್ನುವ ಇನ್ನೊಂದು ಕಾರ್ಯಕ್ರಮ ಇಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ತಾವು ಗ್ರಾಮೀಣ ಪ್ರದೇಶದಲ್ಲಿರತಕ್ಕವರು, ಇಡೀ ನಾಡಿನ ಬಗ್ಗೆ ಬಹಳಷ್ಟು ಮಾಹಿತಿಯನ್ನು ಪಡೆದಿರುವವರು. ನಮ್ಮ ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಯಾವ ರೀತಿ ಇದೆ. ಇದು ಒಂದು ಹುಚ್ಚುತನದ ಕಾರ್ಯಕ್ರಮ. "ಶುಶ್ರೂಷೆ" ಎನ್ನುವ ಹೆಸರು ಬಹಳ ಚೆನ್ನಾಗಿದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಎಲ್ಲಾ ಮಕ್ಕಳಿಗೆ ಅಷ್ಟೇ ಅಲ್ಲ, ವಯೋವೃದ್ಧರಿಗೂ, ಪ್ರತಿಯೊಬ್ಬರಿಗೂ ಆರೋಗ್ಯ ತಪಾಸಣೆ ಮಾಡಬೇಕು. ಇದು ಸಾಧ್ಯವೇ, ಡಾ. ಜೀವರಾಜ್ ಆಳ್ವರವರು ಇಲ್ಲಿಯೇ ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 5 ಕೋಟಿ ಜನ ಇದ್ದಾರೆ, ಈ 5 ಕೋಟಿ ಜನಕ್ಕೆ ಒಂದು ಸಾರಿ ಆರೋಗ್ಯ ತಪಾಸಣೆ ಮಾಡಬೇಕೆಂದರೆ ಕೊನೆಯಪಕ್ಷ, ಯೂರಿನ್ ಟೆಸ್ಟ್, ಟೂಲ್ಸ್ ಟೆಸ್ಟ್, ಎಕ್ಸರೇ ಮಾಡಿಸಿಕೊಂಡರೆ, 150-200 ರೂಪಾಯಿಗಳಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮ ಮಾಡುವುದಕ್ಕೆ ಎಲ್ಲಿ ಆಗುತ್ತದೆ. ಈ ಕೆಲಸ ಮಾಡುವುದಕ್ಕೆ ಬೇರೆ ಬೇರೆ ಜನಗಳ ಸಹಕಾರವನ್ನು ಪಡೆಯುತ್ತೇವೆಂದು ಹೇಳಿದ್ದಾರೆ. ಅಕ್ಷಯ, ಶುಶ್ರೂಷೆ, ವಿಶ್ವ ಮತ್ತು ಆರಾಧನಾ ಕಾರ್ಯಕ್ರಮಗಳು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು ಅವರು ನಮ್ಮ ವಿಧಾನಸಭಾ ಕ್ಷೇತ್ರಕ್ಕೆ ಬಂದಿದ್ದರು. ಅವರಿಗೆ ಒಳ್ಳೆಯ ಉತ್ಸಾಹ ಇದೆ, ಕೆಲಸ ಮಾಡತಕ್ಕ ವಿಚಾರ ಇದೆ. ಅವರು ಹೇಳಿದರು,

ಹರಿಜನ ಕೇರಿಗಳಲ್ಲಿ ಇರತಕ್ಕ ದೇವರುಗಳು ಮಾರಮ್ಮ ಬೀಸಲಮ್ಮ ಮುಂತಾದ ದೇವರುಗಳ ದೇವಸ್ಥಾನಗಳು ರಿಪೇರಿ ಆಗಿಲ್ಲ. ಈ ದೇವಸ್ಥಾನಗಳ ರಿಪೇರಿ ಮಾಡುವುದಕ್ಕೆ ಹಣ ಕೊಡುತ್ತೇವೆಂದು ಈ ಕಾರ್ಯಕ್ರಮವನ್ನು ಸ್ವಾಗತ ಮಾಡುತ್ತೇನೆ. ಇದು ಆಗಬೇಕು, ಏಕೆಂದರೆ, ನಮ್ಮ ಸಮಾಜದಲ್ಲಿ ಬಹಳ ಕೆಳಸ್ಥಾನದಲ್ಲಿರತಕ್ಕ ಜನಗಳಿಗೆ ಹಣ ಕೊಡತಕ್ಕ ಅವಶ್ಯಕತೆ ಇದೆ. ದೇವಸ್ಥಾನ ರಿಪೇರಿ ಆಗಬೇಕು. ಆದರೆ ಇದಕ್ಕೆ ಕೊಟ್ಟಿರತಕ್ಕ ಹಣ ಕೇವಲ 90 ಲಕ್ಷ ರೂಪಾಯಿ. ಈ 90 ಲಕ್ಷ ರೂಪಾಯಿಗಳಲ್ಲಿ ಎಷ್ಟು ದೇವಸ್ಥಾನಗಳನ್ನು ರಿಪೇರಿ ಮಾಡುವುದಕ್ಕಾಗುತ್ತದೆ? ದಯವಿಟ್ಟು ಯೋಚನೆ ಮಾಡಿ. ಇದರಲ್ಲಿ ಒಂದು ಬೆಳ್ಳಿಬೆಳಕು ಕಾಣುವುದು ಎಂದರೆ, ಪವರ್ ಸೆಕ್ಟಾರ್‌ಗೆ ಸ್ವಲ್ಪ ಹಣವನ್ನು ಹೆಚ್ಚು ಮಾಡಿದ್ದಾರೆ. ಮುಖ್ಯಮಂತ್ರಿಗಳಿಗೆ ಯಾರೋ ಸರಿಯಾಗಿ ಅಡ್ವೈಸ್ ಮಾಡಿದ್ದಾರೆ. ಮತ್ತೆ ವಯೋವೃದ್ಧರಿಗೆ ಕೊಡತಕ್ಕ ಮಾಶಾಸನ ಸ್ವಲ್ಪ ಜಾಸ್ತಿ ಮಾಡಿದ್ದೇವೆ ಎನ್ನುವ ವಿಚಾರ ಬಿಟ್ಟರೆ, ಫೈನಾನ್ಶಿಯಲ್ ಡಿಸಿಪ್ಲೀನ್ ತಂದು, ಸೋಷಿಯಾಲಿಸಮ್ ಪ್ಯಾಟ್ರನ್ ಆಫ್ ಸೊಸೈಟಿ ಕಟ್ಟಬೇಕೆಂದು 25 ವರ್ಷಗಳಿಂದ, ಸಮಾಜವಾದಿ ಕನ್ನಡ ನಾಡನ್ನು ಕಟ್ಟಬೇಕು, ಚೆಲುವ ಕನ್ನಡ ನಾಡು ಮಾಡುತ್ತೇವೆಂದು ಏನು ಘೋಷಣೆ ಹಾಕಿದರು ಅದಕ್ಕೆ ಈ ಬಜೆಟ್ ಬಹಳ ದೂರವಾಗಿದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು 60 ಕೋಟಿ ರೂಪಾಯಿ ಡೆಫಿಸಿಟ್ ಎಂದು ಹೇಳಿದ್ದಾರೆ. ಇವರು ಹೇಳಿರತಕ್ಕ ಕಾರ್ಯಕ್ರಮಗಳು ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ನನಗೆ ಗೊತ್ತಿದೆ, ಯಾವುದಕ್ಕೂ ಸಹಿತ ಹಣ ಇಟ್ಟಿಲ್ಲ, ಎಲ್ಲವನ್ನೂ ಮುಂದಿನ ವರ್ಷ ಮಾಡುತ್ತೇವೆ, ಮುಂಚೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಕೇವಲ ಚುನಾವಣೆಗೆ ಅಗತ್ಯವಾಗಿರತಕ್ಕಂಥ ಚುನಾವಣಾ ಘೋಷಣೆಯ ಒಂದು ಬಜೆಟ್, ಅಷ್ಟೇ ಹೊರತು ಇದು ನಮ್ಮ ರಾಜ್ಯದ ಜನತೆಯ ಬಡತನವನ್ನು ಹೋಗಲಾಡಿಸುವುದಕ್ಕೆ ಮಾಡಿರುವ ಬಜೆಟ್ ಅಲ್ಲ ಎಂದು ಹೇಳಬೇಕಾಗಿದೆ. ಚುನಾವಣಾ ಘೋಷಣೆ ಆಗದೇ ಹೋಗಿದ್ದರೆ ಬೇರೆ ಬಜೆಟ್ ಆಗುತ್ತಿತ್ತು. ಚುನಾವಣಾ ಘೋಷಣೆ ಆದಮೇಲೆ ಈ ಬಜೆಟ್ ಇಟ್ಟರು. ಇವರು ಸೆಪ್ಟೆಂಬರ್ ಮೇಲೆ ಇನ್ನೊಂದು ತೆರಿಗೆಯ ಭಾರ ಹಾಕುವುದರಲ್ಲಿ ಯಾವ ಸಂಶಯವೂ ಇಲ್ಲ. ಅದೂ ಆಕಸ್ಮಾತ್ತಾಗಿ ಈ ಸರ್ಕಾರ ಉಳಿದರೆ, ಮಾನ್ಯ ಅಧ್ಯಕ್ಷರೇ ಬರಗಾಲದ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿರುತ್ತೇವೆ. ಮಾನ್ಯ ಖರ್ಗೆಯವರಿಗೆ ಬರಗಾಲ ಪರಿಸ್ಥಿತಿಯನ್ನು ಆದಷ್ಟು ಸುಧಾರಣೆ ಮಾಡಬೇಕೆಂದು ಬಹಳ ಉತ್ಸಾಹ ಇದೆ. ಆದರೆ ಇವರು ಇಲ್ಲೇನು ಹೇಳಿದ್ದಾರೆ ಎಂದರೆ

"I would like to assure the house that the Government will not hesitate to spend any amount required in the coming months to alleviate the sufferings of the people in drought affected areas either for drinking water or for employment. A scheme for supplying fodder to the cattle in the affected taluks is also being implemented".

ವಸ್ತು ಸ್ಥಿತಿ ಬಗ್ಗೆ ಹೇಳಬೇಕೆಂದರೆ, 5-6 ದಿವಸಗಳ ಹಿಂದೆ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೂ 10-10 ಬೋರ್‌ವೆಲ್ ಹಾಕಿಸುವುದಕ್ಕೆ ದುಡ್ಡು ಕೊಟ್ಟಿದ್ದಾರೆ. ಹಿಂದೆ ಜಿಲ್ಲಾವಾರು ಪ್ರವಾಸ ಮಾಡಿದಾಗ 10-15 ಬೋರ್‌ವೆಲ್‌ಗಳನ್ನು ಒಂದೊಂದು ತಾಲ್ಲೂಕಿಗೆ ಹಾಕಿದ್ದಾರೆ. ಒಟ್ಟು 10 ರಿಂದ 25 ಬೋರ್‌ವೆಲ್‌ಗಳನ್ನು ಒಂದೊಂದು ಕ್ಷೇತ್ರಕ್ಕೆ ಹಾಕಿದ್ದಾರೆ. ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷವಾಗಿ ಬರಗಾಲ ಪರಿಸ್ಥಿತಿ ಇರುವಲ್ಲಿ ಕನಿಷ್ಟ ಪಕ್ಷ ಒಂದು ನೂರು ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಅಗತ್ಯತೆ ಇದೆ. ಈ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ 100 ಕೋಟಿ ರೂಪಾಯಿಯಾದರೂ ಸಹಿತ ಸರಕಾರದ ಹತ್ತಿರ ಹಣ ಇರಬೇಕು. ಆದುದರಿಂದ

ಇದು ಕೇವಲ ಘೋಷಣೆಯಾಗಿ ಉಳಿಯುತ್ತದೋ ವಿನಹ ಯಾವುದೇ ದೃಷ್ಟಿಯಿಂದಲೂ ಈ ಸರಕಾರದ ಕೈಯಲ್ಲಿ ಇದನ್ನು ನಿಭಾಯಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಬೇಕೆನ್ನತಕ್ಕಂಥ ದೃಢಸಂಕಲ್ಪ ಸರಕಾರಕ್ಕಿಲ್ಲ ಎಂದು ಹೇಳಬಯಸುತ್ತೇನೆ. ಶಿಕ್ಷಣದ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

ಆದರೆ ನಮ್ಮ ಶಿಕ್ಷಣ ಮಂತ್ರಿಗಳು ಇಲ್ಲಿರುವುದರಿಂದ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ಪ್ರೌಢಶಿಕ್ಷಣಕ್ಕಿಂತ ಹೆಚ್ಚಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತೇವೆ, ಬ್ಲಾಕ್ ಬೋರ್ಡ್ - ಕಪ್ಪು ಹಲಗೆ ಸ್ಕೀಮ್‌ನಲ್ಲಿ ಹೆಚ್ಚು ಬಿಲ್ಡಿಂಗ್‌ಗಳನ್ನು, ಉಪಾಧ್ಯಾಯರನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇದು ಸ್ವಾಗತ ಮಾಡತಕ್ಕ ವಿಚಾರ. ಆದರೆ ಈ ಸಂದರ್ಭದಲ್ಲಿ ಹೈಯರ್ ಎಜುಕೇಷನ್ ಏನಿದೆ ಇದನ್ನು ವಿಶ್ವವಿದ್ಯಾನಿಲಯಗಳನ್ನು ಸ್ಟ್ರೀಮ್‌ಲೈನ್ ಮಾಡುವುದಕ್ಕೆ ದೊಡ್ಡ ಪ್ರಯತ್ನ ತಮ್ಮಿಂದ ಆಗಬೇಕಾಗಿದೆ. ಆದರೆ ಬಹಳ ದುಃಖದ ವಿಚಾರ ಎಂದರೆ, ವಿಶ್ವ ವಿದ್ಯಾನಿಲಯಗಳಲ್ಲಿ, ಎಲ್ಲಿ ಉಚ್ಚ ಶಿಕ್ಷಣದ ಪ್ರಸಾರ ಮಾಡಬೇಕು ಅಲ್ಲಿ ಅವು ಜಾತೀಯ ಕೇಂದ್ರಗಳಾಗಿರತಕ್ಕದ್ದು, ಜಾತೀಯತೆಯನ್ನು ಹಬ್ಬುವ ಕೇಂದ್ರಗಳಾಗಿರತಕ್ಕಂಥಾದ್ದು ಬಹಳ ಕಳವಳ ವ್ಯಕ್ತಪಡಿಸತಕ್ಕಂಥ ವಿಚಾರ. ಈ ಜಾತೀಯತೆ ಎಷ್ಟೊಂದು ಕೆಲಸ ಮಾಡುತ್ತಿದೆ ಎಂದರೆ ಒಂದೇ ಒಂದು ಉದಾಹರಣೆ ತೆಗೆದುಕೊಳ್ಳಬಹುದು. ಅದು ನಮ್ಮ ವೈದ್ಯಕೀಯ ಶಿಕ್ಷಣದ ಪರೀಕ್ಷಾ ಪದ್ಧತಿ.

ನನ್ನ ಮುಂದೆ ಅನೇಕ ಜನ ದೊಡ್ಡ ದೊಡ್ಡ ವೈದ್ಯರು ಶಿಕ್ಷಣದಲ್ಲಿ ಕೆಲಸ ಮಾಡತಕ್ಕ ಜನ ಮಾತನಾಡುತ್ತಾರೆ. ಇವತ್ತು ವೈದ್ಯಕೀಯ ಶಿಕ್ಷಣದಲ್ಲಿ ಎಂ.ಬಿ.ಬಿ.ಎಸ್. ಅಥವಾ ಪೋಸ್ಟ್‌ಗ್ರಾಜುಯೇಟ್ ಡಿಗ್ರಿಗಳನ್ನು ಪಾಸ್ ಮಾಡಬೇಕಾದರೆ ಜಾತೀಯತೆ ಬೇಕು ಅಥವಾ ಹಣ ಬೇಕು. ಎಕ್ಸಾಮಿನರ್‌ಗಳನ್ನು ಹಾಕಬೇಕಾದರೂ ಅದು ಜಾತೀಯತೆಯ ಆಧಾರದ ಮೇಲೆ ಇಂತಹ ಸ್ಟೂಡೆಂಟ್ ಬರುತ್ತಾನೆ ಎಂದರೆ, ಅವನನ್ನು ಫೇಲ್ ಮಾಡಿಸಬೇಕಾದರೆ ಅವನ ಜಾತಿಗೆ ವಿರುದ್ಧವಾಗಿರುವವನನ್ನು ಎಕ್ಸಾಮಿನರ್ ಆಗಿ ಹಾಕುತ್ತಾರೆ, ಪಾಸ್ ಮಾಡಿಸಬೇಕಾದರೆ ಅದೇ ಜಾತೀಯವನನ್ನು ಹಾಕುತ್ತಾರೆ, ಇದು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಇದೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು.

ಆದುದರಿಂದ ಈ ಒಂದು ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕೆಂಬ ಮಾತನ್ನು ಒಂದು ದಿವಸ ಹೇಳಿದೆ, ಈಗಲೂ ಅದೇ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಪಿ.ಜಿ. ಕೋರ್ಸ್‌ಸ್ ಇರಬಹುದು, ಎಂ.ಬಿ.ಬಿ.ಎಸ್. ಫೈನಲ್ ಇಯರ್ ಕೋರ್ಸ್ ಇರಬಹುದು, ಬಹಳಷ್ಟು ಹಣದ ಪ್ರಭಾವ, ಜಾತೀಯತೆಯ ಪ್ರಭಾವ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಾ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಟೆಕ್ನಿಕಲ್ ಎಜುಕೇಷನ್, ಅದು ಎಂ.ಬಿ.ಬಿ.ಎಸ್ ಇರಬಹುದು ಎಂಜಿನಿಯರಿಂಗ್ ಇರಬಹುದು ಅಲ್ಲಿ ಸಿಲಬಸ್ ಚೇಂಜ್ ಮಾಡತಕ್ಕ ಅಗತ್ಯ ಬಹಳವಾಗಿದೆ. ನಿಮ್ಮ ಅಧ್ಯಾಪಕರುಗಳು 15-20 ವರ್ಷಗಳ ಹಿಂದೆ ಕೊಡುತ್ತಿದ್ದ ನೋಟ್ಸ್‌ನ್ನು ಇವತ್ತೂ ಕೊಡುತ್ತಿದ್ದಾರೆ. ಈ ಸಿಲಬಸ್ ಬದಲಾವಣೆ ಮಾಡತಕ್ಕ ಕ್ರಮ, ಎಲ್ಲಾ ಟೆಕ್ನಿಕಲ್ ಎಜುಕೇಷನ್‌ಗಳನ್ನು ಅಪ್ ಗ್ರೇಡ್ – ಮಾಡುವುದಕ್ಕೆ ಒಂದು ಪ್ರಯತ್ನ ನಿಮ್ಮ ಕಾಲದಲ್ಲಿ ಆದರೆ ನಮ್ಮ ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕೆ ಬಹಳ ದೊಡ್ಡ ಸಹಾಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಬೆಂಗಳೂರಿನಲ್ಲಿ ಕಂಪ್ಯೂಟರ್ ಟ್ರೈನಿಂಗ್ ಸ್ಕೂಲ್ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ನನಗೆ ಒಂದು ಆಶ್ಚರ್ಯವಾಗುವುದೇನೆಂದರೆ ಈ ಬಜೆಟ್ಟಿನಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪ ಮಾಡಿಲ್ಲ ಆದರೆ ಈ ಪ್ರೂರ್ ಟ್ರೈಪರೇಟಿಂಗ್ ಇನ್‌ಸ್ಟೂಟ್‌ಗಳ ಮೇಲೆ ಇರುವ ಟ್ಯಾಕ್ಸ್ ಹಾಕತಕಂಥ ಕ್ರಮವನ್ನು

ಮಾಡಿದ್ದಾರೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ಬೆರಳಚ್ಚು ಇನ್ಸ್ಟಿಟ್ಯೂಟ್‌ಗಳು ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಹ ಇವೆ. ಅವರಿಗೆ ನಾಲ್ಕು ಸಾವಿರ ಐದು ಸಾವಿರ ರೂಪಾಯಿ ಟ್ಯಾಕ್ಸ್ ಹಾಕತಕ್ಕಂಥದ್ದನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದು ಟೈಪರೈಟಿಂಗ್ ಸಂಸ್ಥೆಗಳ ಮೇಲೆ ಹಾಕತಕ್ಕಂಥ ತೆರಿಗೆಯನ್ನು ತಕ್ಷಣ ಸಂಪೂರ್ಣವಾಗಿ ರದ್ದು ಮಾಡಿ ಇಲ್ಲದಿದ್ದರೆ ಅವುಗಳನ್ನು ಮುಚ್ಚಬೇಕಾಗುತ್ತದೆ. 10-15 ಜನ ಪಾಪ ಈ ಟೈಪ್‌ರೈಟಿಂಗ್ ಇನ್ಸ್‌ಟಿಟ್ಯೂಟ್‌ಗಳಿಗೆ ಹೋದರೆ ಹೆಚ್ಚು.

ಈ ಟ್ರೈನಿಂಗ್ ತೆಗೆದುಕೊಂಡರೆ ಪಾಪ ಅವರಿಗೆ ಒಂದು ಜೀವನಕ್ಕೆ ಉಪಯೋಗವಾಗುತ್ತದೆ ಅವರ ಮೇಲೆ ತಮ್ಮ ಕಣ್ಣು ಏತಕ್ಕೆ ಬಿತ್ತು? ಈ ಕಂಪ್ಯೂಟರ್ ಸ್ಕೂಲ್ಸ್ ಮೇಲೆ ತಮ್ಮ ಕಣ್ಣು ಏತಕ್ಕೆ ಬೀಳಲಿಲ್ಲ? ಇಲ್ಲಿ ಒಂದು ರೀತಿ ಫ್ರಾಡ್ ನಡೆಯುತ್ತಿದೆ. ಅವರು ಸುಮಾರು 3-4 ಸಾವಿರ ರೂಪಾಯಿ ಫೀಜ್ ತೆಗೆದುಕೊಳ್ಳುತ್ತಾರೆ. ಇದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ ನಮ್ಮ ಸರ್ಕಾರದವರು ಸರ್ಕಾರದವರು ಆಶ್ರಯ ಕಾರ್ಯಕ್ರಮವನ್ನು ಈ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಅಂದರೆ ಸೂರನ್ನು ಕೊಡತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ಒಂದು ಮಾತು ತರಬಯಸುತ್ತೇನೆ ಜನತಾ ಹೌಸಿಂಗ್ ಸ್ಕೀಮ್ ಜೊತೆಯಲ್ಲಿಯೇ ಈ ಎಕ್ಸಪರಿಮೆಂಟಲ್ ಲೋ ಕಾಸ್ ಹೌಸಿಂಗ್ ಸ್ಕೀಮ್‌ನ್ನು ತಾವು ಸಂಪೂರ್ಣವಾಗಿ ನಿಲ್ಲಿಸಿದ್ದೀರಿ.

ಅದು ಏತಕ್ಕೆ ಬೇಡ? ಎಕ್ಸ್‌ಪೆರಿಮೆಂಟಲ್ ಲೋ ಕಾಸ್ಟ್ ಹೌಸಿಂಗ್ ಸ್ಕೀಮ್‌ನ್ನು ನೀವು ಸಂಪೂರ್ಣವಾಗಿ ನಿಲ್ಲಿಸಿದ್ದು ತಪ್ಪು ಇದು ಎಲ್ಲಿ ಅಗತ್ಯ ಇದೆ ಯಾವ ಜಿಲ್ಲಾ ಪರಿಷತ್ ಜಿಲ್ಲಾದಿಕಾರಿಗಳನ್ನು ಕರೆಯಿಸಿ ಪಾಸ್ ಮಾಡಿದ್ದೀರಿ? ನಮ್ಮ ಮಾನ್ಯ ವಾಟಾಳ್ ನಾಗರಾಜ್‌ನವರು ಬಂದಿಲ್ಲ ಅವರ ಚಾಮರಾಜನಗರ ತಾಲ್ಲೂಕಿನಲ್ಲಿ ಸುಮಾರು 3-4 ಸಾವಿರ ಜನರಿಗೆ ಮನೆಗಳು ಇಲ್ಲ. ಅವರು ಇವತ್ತು ಕೇಳುತ್ತಿದ್ದಾರೆ. ನಮಗೆ ನೀವು ಹೆಂಚು ಮತ್ತು ಗಳ ಕೊಡಿ ತಾವು ಮನೆಗಳನ್ನು ಹಾಕಿಕೊಳ್ಳುತ್ತೇವೆಂದು. ಈಗ ಹುಡ್ಕೋ ಯೋಜನೆಯಲ್ಲಿ ಮನೆ ಕೊಡುತ್ತಿದ್ದೀರಿ. ಕೊನೆಯ ಪಕ್ಷ ಒಂದು ಮನೆಗೆ 10-12 ಸಾವಿರ ರೂಪಾಯಿಗಳು ಬೇಕಾಗುತ್ತದೆ. ನಾಲ್ಕು ಲಕ್ಷ 25 ಸಾವಿರ ಮನೆಗಳನ್ನು ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಕೊಟ್ಟಿದ್ದೇವೆ. ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. 1971ನೇ ಇಸವಿಯಲ್ಲಿ ಸೈಟ್‌ಲೆಸ್ ಜನರ ಬಗ್ಗೆ ಒಂದು ಸರ್ವೆ ಆಗಿದೆ. ಮತ್ತೆ ಸರ್ವೆ ಮಾಡುತ್ತೇವೆಂದು ಹೇಳಿದ್ದೀರಿ 1971ನೇ ಇಸವಿಯಲ್ಲಿ ಸೆನ್ಸಸ್ ಮಾಡಿದಾಗ ರಾಜ್ಯದಲ್ಲಿ 12 ಲಕ್ಷಕ್ಕಿಂತಲೂ ಹೆಚ್ಚು ನಿವೇಶನ ರಹಿತ ಜನರು ಇದ್ದರು. 12 ಲಕ್ಷ ಇದ್ದದು ಕಳೆದ 20 ವರ್ಷಗಳ ಹಿಂದೆ ತಾವು ಮನೆ ಕೊಟ್ಟಿರುವುದು ಕೇವಲ 4 ಲಕ್ಷ ಜನರಿಗೆ ಮಾತ್ರ ಇದು ನಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಇನ್ನು ಉಳಿದಿರತಕ್ಕಂಥ ಸುಮಾರು 8 ಲಕ್ಷ ಜನರಿಗೆ ನಿವೇಶನ ಇದ್ದು ಮನೆಗಳನ್ನು ಕಟ್ಟಲಿಕ್ಕೆ ಕಾದಿದ್ದಾರೆ. ಅಂಥಾದ್ದರಲ್ಲಿ ನೀವು ಹೋಗತಕ್ಕಂಥ ಸ್ಪೀಡಿನಲ್ಲಿಯೇ ಹೋಗುವುದಾದರೆ ಎಷ್ಟು ವರ್ಷಗಳಲ್ಲಿ ಇವರಿಗೆ ಮನೆಗಳನ್ನು ಕೊಡಲಿಕ್ಕೆ ಆಗುತ್ತದೆನ್ನುವುದನ್ನು ವಿಚಾರ ಮಾಡಬೇಕು ಈಗ ತಾವೇನೋ ದೊಡ್ಡದಾಗಿ ತಮ್ಮ ಭಾಷಣದಲ್ಲಿ ಹೇಳಿದ್ದೀರಿ ಒಂದು ಲಕ್ಷ ಐವತ್ತು ಸಾವಿರ ಮನೆಗಳನ್ನು ನಾವು ಅಂಬೇಡ್ಕರ್ ಜನ್ಮ ಶತಾಬ್ಧಿಯ ಈ ವರ್ಷದಲ್ಲಿ ಕೊಡುತ್ತೇವೆಂದು ಇದು ಕೇವಲ ಚುನಾವಣೆ ತಂತ್ರ ಮಾನ್ಯ ಅಧ್ಯಕ್ಷರೇ ತಮ್ಮ ಕ್ಷೇತ್ರದಲ್ಲಿ ಹೇಗಿದೆಯೋ ನನಗೆ ಗೊತ್ತಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ ಜನತಾ ಹೌಸಿಂಗ್ ಸ್ಕೀಮ್‌ನಲ್ಲಿ ಬರತಕ್ಕಂಥ ಹಣದ ಎರಡು ಇನ್‌ಸ್ಟಾಲ್‌ಮೆಂಟ್‌ನ್ನು ತಾವು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ ಬಿಡುಗಡೆ ಮಾಡಿದಿರಿ ಇನ್ನು 8 ತಿಂಗಳುಗಳಿಂದ ಒಂದು ಪೈಸೆ ಹಣ ಸಹ ಬಿಡುಗಡೆ

ಮಾಡಿಲ್ಲ ಮೊನ್ನೆ 15 ದಿವಸಗಳ ಹಿಂದೆ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ 40 ಕೋಟಿ ರೂಪಾಯಿಗಳ ಹಣ ಸರ್ಕಾರದಿಂದ ಬಾಕಿ ಇದೆ.

ಇವತ್ತು ತಾವು ಬಡವರಿಗೆ ಏನು ಮಾಡಿತ್ತಿದ್ದೀರಿ. ಈ ಸಿಸ್ಟಂ ತಮಗೆ ಗೊತ್ತಿದೆ. 4 ಅಡಿ ಗೋಡೆ ಬರುವವರೆವಿಗೂ ದುಡ್ಡು ಕೊಡುವುದಿಲ್ಲ. ಅವನ್ನು ತಾಳಿ ಮಾಡಿ ಪಾತ್ರೆ ಚಂಬು ಮಿಕ್ಕಿದ್ದರೆ ದವಸದಾನ್ಯ ಮಾರಾಟ ಆ 4 ಅಡಿ ಗೋಡೆ ಕಟ್ಟಿದರೂ ಆ ದುಡ್ಡು ರಿಲೀಜ್ ಮಾಡಿಲ್ಲ ಒಂದೂವರೆ ವರ್ಷದಿಂದ ಇನ್ನು ಹೇಗೆ ಅವನು ಮನೆ ಕಟ್ಟುತ್ತಾನೆ. ಈಗ ಏನು ಹೇಳಬೇಕು ನಿಮ್ಮ ಬಜೆಟ್‌ಗ್ಗೆ ಮಾನ್ಯ ನನಗೆ ಗೊತ್ತಾಗುತ್ತಿಲ್ಲ, ಕೇವಲ ನೀವು ಚುನಾವಣೆ ಘೋಷಣೆಗಳಿಗೆ ಈ ಒಂದು ಪ್ರಚಾರವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರೆ ಹೊರತು ಈ ಕೆಸಗಳಿಗೆ ಹಣ ರಿಲೀಜ್ ಮಾಡಿಲ್ಲ ಯಾವ ಕಾರಣಕ್ಕೆ ಹಣ ರಿಲೀಜ್ ಮಾಡಿಲ್ಲ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ವಿಷಯ ಗೊತ್ತಿಲ್ಲವೆಂದು ನಾನು ಹೇಳಬೇಕಾಗುತ್ತದೆ ನಾನು ಒಂದು ಸಾರಿ ಕೇಳಿದಾಗ ಅವರು ಹೇಳಿದರು ಇದೆಲ್ಲಾ ನಿಮ್ಮ ಕಾಲದಲ್ಲಿ ಕೊಟ್ಟಿದ್ದುದು ಎಂದು ಅದಕ್ಕೆ ಆರ್.ಎನ್. ನಾಯಕ್‌ರವರು ಸಹ ಧ್ವನಿಗೂಡಿಸಿದರು ಇದು ನಮ್ಮ ಕಾಲದ್ದು ನಿಮ್ಮ ಕಾಲದ ಪ್ರಶ್ನೆ ಅಲ್ಲ. ಇದು ನಿರಂತರವಾಗಿ ಆಗತಕ್ಕಂಥ ಕೆಲಸ 1981 ನಾವು ಅಧಿಕಾರಕ್ಕೆ ಬಂದೆವು. ಆಗ 50 ಸಾವಿರ ಮನೆಗಳು ಬಾಕಿ ಇದ್ದವು ಕಟ್ಟಲಿಲ್ಲವೇ? ಸರ್ಕಾರ ಎನ್ನತಕ್ಕಂಥದ್ದು ಖಜಾನೆ ಸರ್ಕಾರದ ಆಡಳಿತ ಯಂತ್ರ ನಿರಂತರವಾಗಿ ನಡೆಯುವಂಥಾದ್ದು ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಬಡವರಿಗೆ ಮನೆಗಳನ್ನು ಕೊಡಬೇಕೆಂದು 40 ಕೋಟಿ ರೂಪಾಯಿಗಳ ಬಾಕಿ ಏನು ಇದೆ ಆ ಹಣವನ್ನು ತಕ್ಷಣ ರಿಲೀಜ್ ಮಾಡಬೇಕು ಮತ್ತು ಲೋ ಕಾಸ್ಟ್ ಹೌಸಿಂಗ್ ಸ್ಕೀಮ್ ಅನ್ನು ಏನು ಕೈ ಬಿಟ್ಟಿದ್ದೀರಿ ಅದನ್ನು ಪುನಃ ಪ್ರಾರಂಭ ಮಾಡಬೇಕು ಮತ್ತೆ ನಮ್ಮ ಮುಖ್ಯಮಂತ್ರಿಗಳು ಹಿಂದುಳಿದ ವರ್ಗಕ್ಕೆ ಸೇರಿದವರು. ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ ಎನ್ನುವ ಒಂದೇ ಕಾರಣದಿಂದ ಇವತ್ತು ಮುಖ್ಯ ಮಂತ್ರಿಗಳಾಗಿದ್ದಾರೆ. ಮಾನ್ಯ ಬಂಗಾರಪ್ಪನವರ ಇಲ್ಲವೆಂದರೆ ಅವರು ಆಗುತ್ತಿರಲಿಲ್ಲ ಆದರೆ ಹಿಂದುಳಿದ ವರ್ಗದವರಿಗೆ ಮಾನ್ಯ ಮುಖ್ಯಮಂತ್ರಿಗಳು ತೋರಿಸಿರತಕ್ಕಂಥ ಕಳಕಳಿ ಏನು? ಮಾನ್ಯ ರಂಗನಾಥ್‌ರವರು ಹಿರಿಯ ಸದಸ್ಯರು ಇದನ್ನು ಅವರು ಗಮನಿಸಿದ್ದಾರೆಂದು ನಾನು ತಿಳಿದಿದ್ದೇನೆ. "As part of the Dr. Ambedkar Centenary Celebrations in 1990-91, we have pulled the special component Programme Funds of about Rs 30 crores to take up the following programmes".ಎಂದು ಹೇಳಿದ್ದಾರೆ ನಮ್ಮ ಶಿವಣ್ಣನವರು, ಸಮಾಜ ಕಲ್ಯಾಣ ಮಂತ್ರಿಗಳು ಬಹಳ ಒಳ್ಳೆಯವರು ಅವರು ಚೆನ್ನಾಗಿ ಶಾಸ್ತ್ರ ಹೇಳುತ್ತಾರೆ. ನಮಗೆಲ್ಲರಿಗೂ ಸದಾ ಅವರು ಒಳ್ಳೆಯ ಸ್ನೇಹಿತರು. ಆದರೆ ಅವರು ಜೋತಿಷ್ಯ ಬಹಳ ನೋಡುತ್ತಾರೆ. ಬಡವರ ಜ್ಯೋತಿಷ್ಯದ ಬಗ್ಗೆ ಅವರ ಕೈಯಲ್ಲಿ ನಾಡಿ ಹಿಡಿಯುವುದಕ್ಕಾಗಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಗೆರೆ ಇದ್ರೆ ತಾನೇ ಅವರು ನೋಡುವುದು ಗೆರೇನೇ ಇಲ್ಲದಿದ್ದರೆ ಅವರು ಏನು ನೋಡುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಶಿವಣ್ಣನವರು ಬಹಳ ಬುದ್ಧಿವಂತರಿದ್ದಾರೆ. ನಾನು ನಿಮ್ಮ ಪಾರ್ಟಿದು ಕೇಳಲಿಲ್ಲ ನಿಮ್ಮ ನಾಯಕರ ಭವಿಷ್ಯ ಕೇಳಿದೆ, ಅದೊಂದು ಮಾತ್ರ ಕೇಳಬೇಡಿ ಎಂದು ಹೇಳುತ್ತಾರೆ. ಅಂದರೆ ಅರ್ಥ ಮಾಡಿಕೊಳ್ಳಬಹುದಲ್ಲ? ಇನ್ನು 30.16 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಇದಕೋಸ್ಕರ ಇಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದು ಬಜೆಟ್‌ನಲ್ಲಿ ತೋರಿಸಬೇಕಲ್ಲಾ ಇವರು ಏನು

ಮಾಡಿದ್ದಾರೆ? ಅದನ್ನು ಅಲ್ಲಿ ತೋರಿಸಲೇ ಇಲ್ಲ. ರೆಗ್ಯೂಲರ್ ಪ್ರೋಗ್ರಾಮ್ ಏನಿದೆ ಅವರ ಜೊತೆಗೆ ಇದನ್ನು ಮಾಡುತ್ತೇವೆಂದು ಹೇಳುವುದನ್ನು ಬಿಟ್ಟು ಕೇವಲ ಅಂಬೇಡ್ಕರ್ ಹೆಸರಿನ ಮೇಲೆ ಓಟನ್ನು ಪಡೆಯುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ. ಇದರಿಂದ ಉಪಯೋಗವಾಗಲಿಕ್ಕಿಲ್ಲ. ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಈ ಹಿಂದುಳಿದ ವರ್ಗಗಳ ಕಲ್ಯಾಣಕೋಸ್ಕರ ಒಂದು ಕಾರ್ಪೊರೇಷನ್ ಇದೆ ಇದಕ್ಕೆ ಇವರು ಎಷ್ಟು ಕೊಟ್ಟಿದ್ದಾರೆಂದರೆ ಹೋದ ವರ್ಷ ಒಂದುವರೆ ಕೋಟಿ ರೂಪಾಯಿ ಕೊಟ್ಟಿದ್ದರು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ರು ಈಗ ಸದ್ಯಕ್ಕೆ ಆಗುವುದಿಲ್ಲ ಮುಂದಿನ ವರ್ಷ ಕೊಡುತ್ತೇನೆ ಎಂದು ಈಗ 4ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದಕ್ಕೆ ದೊಡ್ಡ ಪಂಗನಾಮವನ್ನೇ ಹಾಕಿಬಿಟ್ಟಿದ್ದಾರೆ. ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಾಲ್ಕು ಪ್ಲಸ್ ಎರಡು ಒಟ್ಟು 6 ಕೋಟಿ ರೂಪಾಯಿ.

ಈ ಎರಡೂ ಕಾರ್ಪೊರೇಷನ್‌ನಲ್ಲಿರತಕ್ಕಂಥ ಎಂಪ್ಲಾಯಸ್‌ಗೆ 3 ಕೋಟಿ ರೂಪಾಯಿ ಸಂಬಳಕ್ಕಾಗಿ ಹೋಗಿಬಿಡುತ್ತದೆ ಅವರ ಟಿ.ಎ., ಡಿ.ಎ. ಎಷ್ಟೆಷ್ಟು ತೆಗೆದುಕೊಳ್ಳುತ್ತಾರೋ ಅದು ನನಗೆ ಗೊತ್ತಿಲ್ಲ. ಇನ್ನು ಎರಡು ಕೋಟಿ ರೂಪಾಯಿ ಉಳಿಯುತ್ತದೆ. ಈ ಎರಡು ಕೋಟಿ ರೂಪಾಯಿಗಳಲ್ಲಿ ಎಷ್ಟು ಜನ ಹಿಂದುಳಿದ ವರ್ಗದವರಿಗೆ ಮತ್ತು ಮೈನಾರಿಟೀಸ್ ಜನರಿಗೆ ಸಾಲವನ್ನು ಕೊಡುವುದಕ್ಕೆ ಸಾಧ್ಯವೆಂದು ತಾವೇ ಯೋಚನೆ ಮಾಡಬೇಕು. ಮುಖ್ಯ ಮಂತ್ರಿಗಳೇ ಇದರ ಬಗ್ಗೆ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಹಿಂದುಳಿದ ವರ್ಗದವರಾಗಲೀ ಅಥವಾ ಅಲ್ಪ ಸಂಖ್ಯಾತರಾಗಲೀ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದರಿಗಾಗಲೀ ಏನು ಪ್ರಯೋಜನವಾಗುತ್ತಿದೆ? ಕೇವಲ ಶತಮಾನೋತ್ಸವ ಆಚರಣೆ ಮಾಡಬೇಕು ಕೇಂದ್ರ ಸರ್ಕಾರದವರು ಒಂದು ನೋಟೀಸನ್ನು ಕಳುಹಿಸಿದ್ದಾರೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದಾರೆಯೇ ಹೊರೆತು ಬೇರೆ ಏನೂ ಅಲ್ಲ ಇದರ ಬಗ್ಗೆ ಸರ್ಕಾರದಿಂದ ಕಳಕಳಿಯ ಪ್ರಯತ್ನವಾಗಿಲ್ಲವೆಂದು ಈ ಸಂದರ್ಭದಲ್ಲಿ ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಇದನ್ನು ಎಲ್ಲರೂ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿರತಕ್ಕಂಥಾ

"The performance of the KSRTC has been improving in the last few years. However, it does not have the capacity to cover all the routes, particularly, in rural areas of the state.

The Government is seriously considering allowing the private sector to operate on such of the routes where the KSRTC is unable to operate. The details of the proposal are being worked out".

ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಕಳೆದ ಮೂವತ್ತು ವರ್ಷಗಳ ಕಾಲದಲ್ಲಿ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನನಗೆ ತಿಳಿದ ಹಾಗೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ರಾಜ್ಯ ಸರ್ಕಾರದ ಬಂಡವಾಳವನ್ನು ಅದರಲ್ಲಿ ನಾವು ಹಾಕಿದ್ದೇವೆ. ಸಾರಿಗೆ ಸಂಸ್ಥೆಯ ಆಸ್ತಿ ಒಂದು ಸಾವಿರ ಕೋಟಿಗೂ ಹೆಚ್ಚು ಆಗುತ್ತದೆ. 50 ಸಾವಿರ ಜನ ಕಾರ್ಮಿಕರು ಅದರಲ್ಲಿ ದುಡಿಯುತ್ತಿದ್ದಾರೆ. ನಿಮಗೆ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಮೊನ್ನೆ 36 ಸಾವಿರ ಜನ ಕಾರ್ಮಿಕರು ದೊಡ್ಡ ಮೆರವಣಿಗೆ ಮಾಡಿ ಈ ಸದನದ ಅಧ್ಯಕ್ಷರಿಗೆ ಒಂದು ಮನವಿಯನ್ನು ಕೊಡಬೇಕೆಂದು ಹೇಳಿ ಅವರು ತೀರ್ಮಾನ ಮಾಡಿ ಮನವಿಯನ್ನು ನನ್ನ ಕೈಗೆ ಕೊಟ್ಟಿದ್ದಾರೆ. ತಮಗೆ ಕೊಡಬೇಕೆಂದು ಹೇಳಿ ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ವರ್ಕರ್ಸ್ ಫೆಡರೇಷನ್‌ವರು ಕೊಟ್ಟಿದ್ದಾರೆ. ಅದಕ್ಕೆ ಹಿಂದೆ ನಮ್ಮ ಸದನದಲ್ಲಿದ್ದ

ಮಾನ್ಯ ಎಂ.ಎಸ್. ಕೃಷ್ಣನ್‌ರವರು ಅಧ್ಯಕ್ಷರು ಇವರೆಲ್ಲಾ ದೊಡ್ಡ ರ್‍ಯಾಲಿ ಮಾಡಿ ಒಂದು ಮೆಮೋರ್‍ಯಾಂಡಂ ಕೊಟ್ಟಿದ್ದಾರೆ.

ಇದು ಸರ್ಕಾರಕ್ಕೆ ಮತ್ತು ಸದನದ ಅಧ್ಯಕ್ಷರಿಗೆ ಕೊಟ್ಟಿರುವಂತಹ ಮನವಿ. (ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್‌ನವರು ಕೊಟ್ಟಂತಹ ಮೆಮೋರ್‍ಯಾಂಡಂ ಪ್ರತಿಯನ್ನು ಅಧ್ಯಕ್ಷರಿಗೆ ಹಾಗೂ ಸರ್ಕಾರಕ್ಕೆ ತಲುಪಿಸಿದರು) ಇವರು ಅದರಲ್ಲಿ ಏನು ಹೇಳಿದ್ದಾರೆ ಎಂದರೆ ಕೆ.ಎಸ್.ಆರ್.ಟಿ.ಸಿ.ಯನ್ನು ಈ ಸರ್ಕಾರ ಟೋಟಲ್ ಆಗಿ ಪ್ರೈವಟೈಸ್ ಮಾಡುವುದಕ್ಕೆ ಹೊರಟಿದ್ದರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ. ಪ್ರೈವೇಟ್‌ನವರಿಗೆ ಎಲ್ಲಿ ಕೆ.ಎಸ್.ಆರ್.ಟಿ.ಸಿ.ಗೆ ನಷ್ಟವಾಗತಕ್ಕಂಥಹ ರೂಟ್ಸ್ ಇದೆ ಅವುಗಳನ್ನು ಮಾತ್ರ ಕೊಡಲಿಕ್ಕೆ ಯೋಚನೆ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಯಾವ ಪ್ರೈವೇಟ್ ಆಪರೇಟರ್ಸ್ ಲಾಸ್ ಆಗತಕ್ಕಂಥ ರೂಟ್‌ನಲ್ಲಿ ಬಂದು ಬಸ್ ಸಹ ನಡೆಸುವುದಕ್ಕೆ ತಯಾರು ಇದ್ದಾನೆ ಹೇಳಿ? ಈಗ ಬಿ.ಟಿ.ಎಸ್. ಇದೆ. ಬಿ.ಟಿ.ಎಸ್.ನಲ್ಲಿ ಪ್ರೈವೇಟ್ ಆಪರೇಟರ್ಸ್ ಬಂದು ನಡೆಸುವುದಕ್ಕೆ ಸಿದ್ಧರಿದ್ದಾರೆಯೆ? ಇವತ್ತು ನಿಮ್ಮ ಪಕ್ಷದ ಮೂಲಭೂತವಾದ ತಲಹದಿ ಏನು ಇದೆ? ರಾಷ್ಟ್ರೀಕರಣ ಮಾಡಬೇಕೆಂದು ಹೇಳಿ ತಾವು ಏನು ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದಿರಿ ಆ ಇತಿಹಾಸವನ್ನು ತಾವು ಸ್ವಲ್ಪ ಜ್ಞಾಪಕ ಮಾಡಿಕೊಳ್ಳಿ. ಏಕೆ ಈ ದೃಷ್ಟಿಯಿಂದ ನೀವು ಕೈಹಾಕುತ್ತಿದ್ದೀರಿ. ಎಂಬುದು ನನಗೆ ಅರ್ಥ ಆಗುತ್ತಿಲ್ಲ ನಿಮ್ಮ ಸರ್ಕಾರದ ಧೋರಣೆ ಪ್ರತಿ ಒಂದು ವಿಚಾರದಲ್ಲಿಯೂ ಸಹ ಖಾಸಗಿಯವರಿಗೆ ಸಹಾಯ ಮಾಡಬೇಕು ಎಂಬ ದೃಷ್ಟಿಯಿಂದ ವಿಚಾರ ಮಾಡುತ್ತಿದ್ದೀರಿ. ಏಕೆ? ಎಂ.ಇ.ಐ. ಫ್ಯಾಕ್ಟರಿಯನ್ನು ಬೇರೆಯವರಿಗೆ ಕೊಡಬೇಕು ಎನ್ನತಕ್ಕ ಪ್ರಯತ್ನ ನಡೆಯುತ್ತಿದೆ. ಕಳೆದ ಒಂದು ವರ್ಷದ ಕಾಲದಲ್ಲಿ ಎ.ಇ.ಐ. ಫ್ಯಾಕ್ಟರಿ ಲಾಭ ಮಾಡಿದೆ.

ಅಲ್ಲಿರತಕ್ಕಂಥ ಒಂದು ಸಾವಿರ ಕಾರ್ಮಿಕರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂದು ಕೇಂದ್ರ ಸರ್ಕಾರದವರು ಸಹ ಹೇಳಿದ್ದಾರೆ. ಆ ಫ್ಯಾಕ್ಟರಿಯನ್ನು ಪ್ರೈವೇಟನವರಿಗೆ ಮಾಡುವುದಕ್ಕೆ ಅಸೆಸ್‌ಮೆಂಟ್ ಮಾಡಿಸುತ್ತಿದ್ದಾರೆ. ಇದು ಆದ ನಂತರ ಎಂ.ಸಿ.ಎಫ್. ಅಂತೂ ಮಾರಾಟ ಆಗಿಯೇ ಹೋಯಿತು. ಈಗ ಎಂ.ಸಿ.ಎಫ್. ಮಾರಾಟ ಮಾಡಲೇಬೇಕು ಎಂದು ಇದ್ದೀರಾ? ಗ್ಲೋಬಲ್ ಟೆಂಡರ್ ಏಕೆ ಕರೆಯಲಿಲ್ಲ? ಗ್ಲೋಬಲ್ ಟೆಂಡರ್ ಕರೆಯದೆ ಮಾಡಿದ್ದೀರಿ. ನಾನು ಈ ಸದನದಲ್ಲಿ ಪ್ರಶ್ನೆ ಎತ್ತಿದ್ದಾಗ ಸಮಯ ಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಯಾಕೆ ನಿಮಗೆ ಸಮಯ ಬೇಕು ಎಂದರೆ ಲೋಕಾಯುಕ್ತ ಪ್ರೀಎನ್‌ಕ್ವೈರಿ ಆಗುತ್ತಿದೆ ಎಂದು ಹೇಳಿದರು ಯಾರ ಮೇಲೆ ಲೋಕಾಯುಕ್ತದ ಎನ್‌ಕ್ವೈಯರಿ ಆಗುತ್ತದೆ? ಇದರ ಅರ್ಥ ಏನು ಎಂದರೆ ಇದರಲ್ಲಿ ಏನೋ ಅಧಿಕಾರಿಗಳ ಮಟ್ಟದಲ್ಲಿ ಅಥವಾ ರಾಜಕಾರಣಿಗಳ ಮಟ್ಟದಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿ ಅದೇ ರೀತಿ ಪ್ರತಿ ಕೇಸ್ ಫ್ಯಾಕ್ಟರಿಗಳನ್ನು ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಈಗ ಮೈಸೂರಿನ ಗಂಧದ ಎಣ್ಣೆ ಫ್ಯಾಕ್ಟರಿ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಫ್ಯಾಕ್ಟರಿಯನ್ನು ಪ್ರೈವೇಟ್‌ನವರಿಗೆ ಮಾರಾಟ ಮಾಡುವುದಕ್ಕೆ ಹೊರಟ್ಟಿದ್ದಾರೆಂಬ ಮಾತನ್ನು ನಾನು ಕೇಳಿದ್ದೇನೆ. ರಾಜ್ಯ ಸರ್ಕಾರದ ಯಾವುದೇ ಒಂದು ಸ್ವತ್ತನ್ನು ಮಾರಬೇಕಾಗಿದ್ದರೆ ನಮ್ಮನ್ನು ವಿಶ್ವಾಸಕ್ಕೆ ಏತಕ್ಕೆ ತಾವು ತೆಗೆದುಕೊಳ್ಳುವುದಿಲ್ಲ?

ನೀವು ಇಲ್ಲಿ ಪರ್ಮನೆಂಟಾಗಿ ಇರುವುದಿಲ್ಲ ಎಂಬುದು ನಿಮಗೂ ಗೊತ್ತಿದೆ. ನಮ್ಮನ್ನು ಏಕೆ ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು? ಈಗ ಎಂ.ಸಿ.ಎಫ್.ಯನ್ನು ಮಾರಾಟ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಸಹೋದ್ಯೋಗಿಗಳಾದ ಡಾ. ಜೀವರಾಜ್ ಆಳ್ವ

ಅವರು ನನಗೂ ಜ್ಞಾಪಕ ಇದೆ ನಿಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಈಗ ನಮ್ಮನ್ನು ನೀವು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಲಿಲ್ಲ ಎಂ.ಸಿ.ಎಫ್. ಮಾರಾಟದಲ್ಲಿ ದುರ್ವ್ಯವಹಾರ ನಡೆದಿದೆ. ಸದನದ ಒಂದು ಸಮಿತಿಯನ್ನು ಏಕೆ ಮಾಡಬಾರದು? ನಾನು ಕೆ.ಎಸ್.ಆರ್.ಟಿ.ಸಿ. ವಿಚಾರದಲ್ಲಿ ಸಹಕರಿಸುವುದನ್ನೇ ಒತ್ತಾಯ ಮಾಡುತ್ತೇನೆ ಸರ್ಕಾರದ ಧ್ವನಿ ಏನು ಇದೆ? ತಮ್ಮ ಮುಖ್ಯಮಂತ್ರಿಗಳಾಗಲೀ ಅಥವಾ ಮಾನ್ಯ ಮಂತ್ರಿಗಳಿಗಾಗಲೀ ತಮ್ಮ ಧ್ವನಿ ಬಹಳ ಮುಖ್ಯ 36 ಸಾವಿರ ಜನ ಕಾರ್ಮಿಕರು ನೊಂದು ಇಡಿ ರಾಜ್ಯದಲ್ಲಿ ಬೀದರ್‌ನಿಂದ ಕೊಡಗಿನಿಂದ ಎಲ್ಲಾ 89 ಡಿಪೋಗಳಿಂದ ಇಲ್ಲಿಗೆ ಬಂದು ಏಕಧ್ವನಿಯಲ್ಲಿ ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇರುವುದು 50 ಸಾವಿರ ಜನ ಕಾರ್ಮಿಕರು. 50 ಲಕ್ಷ ಜನ ಪ್ಯಾಸೆಂಜರ್ಸ್ ಟ್ರಾವೆಲ್ ಮಾಡುತ್ತಾರೆ. ಅವರ ದೃಷ್ಟಿಯಿಂದ ಇರಬೇಕೋ ಅಥವಾ ನ್ಯಾಷನಲೈಷೇನ್ 50ಸಾವಿರ ಕಾರ್ಮಿಕರ ದೃಷ್ಟಿಯಿಂದ ಇರಬೇಕೋ? ಏಕೆಂದರೆ ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ರಾಯಚೂರು ಇತ್ಯಾದಿ ವಿಭಾಗದಲ್ಲಿ ಸಾಕಷ್ಟು ಜನ ಬಸ್‌ನ ಟಾಪ್ ಮೇಲೆ ಕೂತು ಹೋಗುತ್ತಿದ್ದಾರೆ. ಎಂದು ಮೇಲ್ಮನೆಯಲ್ಲಿ ಹೇಳಿದ್ದೆ. ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಹೊಸ ಪಾಲಿಸಿ ಪ್ರಕಾರ ಶಿವಮೊಗ್ಗ ಮತ್ತು ಮೈಸೂರು ವಿಬಾಗಗಳಲ್ಲಿ ನ್ಯಾಷನಲೈಸೇಷನ್ ಆಗಲಿಲ್ಲ ಅಲ್ಲೆಲ್ಲಾ ನಾವು ಪ್ರೈವೇಟ್‌ನವರಿಗೆ ಬಿಟ್ಟು ಕೊಟ್ಟಿದ್ದೇವೆ. ಪ್ರತಿ ಹಳ್ಳಿಯಲ್ಲಿಯಾ ಸಹ 5 ನಿಮಿಷಗಳಿಗೆ 10 ನಿಮಿಷಗಳಿಗೊಂದರಂತೆ ಬಸ್‌ಗಳು ಓಡಾಡುತ್ತಿದೆ. ಈಗ ಏನು ಆಗುತ್ತಿದೆ? ತಾವು ಹೇಳಿದ ಪ್ರಕಾರ ನಮಗೆ ಏನು ತೊಂದರೆ ಅಂದರೆ

ಶ್ರೀ ಬಸವರಾಜ ರಾಯರೆಡ್ಡಿ : ಬಸ್ ಓಡುತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಕೆ.ಎಸ್.ಆರ್.ಟಿ.ಸಿ.ಯವರಿಗೆ ಓವರ್‌ಹೆಡ್ ಚಾರ್ಜಸ್ ಜಾಸ್ತಿಯಾಗಿದೆ. ಸುಮಾರು ಒಂದು ಕಿ.ಮೀ.ಗೆ 7-8 ರೂ. ಆಗುತ್ತದೆ ಅದೇ ಪ್ರೈವೇಟ್‌ನವರಿಗೆ ಒಂದು ಎರಡು ಬಸ್ ಇಟ್ಟು ಕೊಂಡಿರುತ್ತಾರೆ ಒಬ್ಬ ಡ್ರೈವರ್ ಇರುತ್ತಾರೆ ರಿಪೇರಿ ಅವನೇ ಮಾಡಿಕೊಳ್ಳುತ್ತಾನೆ. ಹೀಗಿರುವುದರಿಂದ ಕಾಸ್ಟ್ ಪರ್ ಕಿ.ಮೀ.ಗೆ ಮೂರು ನಾಲ್ಕು ಅಗುತ್ತದೆ. ಆದ್ದರಿಂದ ಅವರಿಗೆ ಅಲ್ಲಿ ಇಲ್ಲಿಗೆ ಬಸ್ ಬೇಕು ಎಂದರೆ ಕೊಡೋಕಾಗುತ್ತದೆ. ಬರೀ ರಾಷ್ಟ್ರೀಕರಣದ ಉದ್ದೇಶದಿಂದ ಜನರಿಗೆ ಹಿತವಾಗುವ ಕೆಲಸ ಮಾಡಬೇಕೇ ಹೊರತು ಕೇವಲ 50 ಸಾವಿರ ಜನರಿಗೆ ಹಿತದ ವಿಚಾರದಲ್ಲಿ ಹೋದರೆ ಬಹುಶ ನಾಳೆ ಜನ ರಿವೋಲ್ಟ್ ಆಗುವ ಸಂದರ್ಭ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಕೆ.ಎಸ್.ಆರ್.ಟಿ.ಸಿ. ಮೇಲೆ ಒಂದು ಸಾವಿರ ಕೋಟಿ ಬಂಡವಾಳ ಹಾಕಿ ರಾಜ್ಯಸರ್ಕಾರದ್ದು ಕೇವಲ ಅಲ್ಲಿರುವ 50 ಸಾವಿರ ಜನರಿಗೆ ಉಪಯೋಗವಾಗಬೇಕೆನ್ನುವ ಮಾತು ನಾನು ಹೇಳುವುದಿಲ್ಲ ಆದರೆ ನಿಮ್ಮ ಖಾಸಗೀಕರಣ ಧ್ವನಿ ಏನಿದೆ ಅದರಿಂದ ಏನಾಗುತ್ತದೆ. ಎನ್ನುವುದನ್ನು ತಾವು ವಿಚಾರ ಮಾಡಿ. ಕೇವಲ ಈ ಕೆ.ಎಸ್.ಆರ್.ಟಿ.ಸಿ.ಯನ್ನು ಸರಿಮಾಡಲಿಕ್ಕಾಗಿ ಇದನ್ನು ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಎನ್.ಸಿ.ಎಫ್.ನ್ನು ಖಾಸಗಿಯವರಿಗೆ ಕೊಟ್ಟಿದ್ದೀರಿ ಎನ್.ಇ.ಐ.ಬಿನ್ನು ಖಾಸಗೀಯವರಿಗೆ ಕೊಡಲು ಹೊರಟಿದ್ದೀರಿ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಯನ್ನು ಖಾಸಗಿಯವರಿಗೆ ಕೊಡಲು ಹೊರಟಿದ್ದೀರಿ. ನಿಮ್ಮ ತತ್ವ ಏನು? ರಾಷ್ಟ್ರೀಕರಣದಲ್ಲಿ ಸಮಾಜವಾದದಲ್ಲಿ ನಿಮಗೆ ನಂಬಿಕೆ ಇಲ್ಲವೋ? ನನಗೆ ಗೊತ್ತಿದೆ ನೀವು ಹೇಳಿ. ನಾನು ಕೇಳುವುದು ಇಷ್ಟೇ ನಿಮಗೆ ರಾಷ್ಟ್ರೀಕರಣದಲ್ಲಿ ನಂಬಿಕೆ ಇಲ್ಲದಿದ್ದರೆ ಜನಗಳ ಮುಂದೆ ಹಾಗೆಂದು ಹೇಳಿ ಖಾಸಗೀಕರಣದಲ್ಲಿ ನಂಬಿಕೆ ಇದೆ ಎಂದು. ಜಾರ್ಜ್‌ರವರು ನನ್ನ ಸ್ನೇಹಿತರು ಅವರು ಒಂದು ವರ್ಷ ಕಾಲ

ಸಾರಿಗೆ ಮಂತ್ರಿಯಾಗಿದ್ದರು. ಅನುಭವ ಇಲ್ಲ ಎಂದು ಹೇಳುವುದಿಲ್ಲ ನಾನು ಜವಾಬ್ದಾರಿಯಿಂದ ಮಾತಾಡಕ್ಕೆ ಇದ್ದೇನೆ. ಒಂದು ವರ್ಷ ಕಾಲ ನಾನು ಹೇಳಿದ ಹಾಗೆ ಕೆ.ಎಸ್.ಆರ್.ಟಿ.ಸಿ.ಯನ್ನು ನಡೆಸಿರಿ ಅದ್ಯಾಕೆ ಲುಕ್ಸಾನಾಗುತ್ತದೆ. ನೋಡ್ತಿನಿ ನಾನು. ಸವಾಲಾಗಿ ತೆಗೆದುಕೊಳ್ಳುತ್ತೇನೆ. ಆದರೆ ತೊಂದರೆ ಇರುವುದು ಎಲ್ಲೆಂದರೆ ಮ್ಯಾನೇಜ್‌ಮೆಂಟ್ ಡಿಸಿಷನ್ಸ್‌ನ್ನು ತೆಗೆದುಕೊಳ್ಳಲು ತಯಾರಿಲ್ಲ ಕೆ.ಎಸ್.ಆರ್.ಟಿ.ಸಿ. ಲಾಸಾಗುತ್ತಿದೆ ಎಂದು ಯಾರು ಹೇಳುತ್ತಾರೆ ಇವತ್ತು? 70 ಕೋಟಿ ರೂ. ಲಾಸನ್ನು ನಾವು ಸ್ಟೂಡೆಂಟ್ಸ್‌ಗೆ, ಕುಂಟರಿಗೆ, ಕುಡರಿಗೆ ಕೊಡುವ ಪಾಸ್‌ನಿಂದ ಅನುಭವಿಸುತ್ತಿದ್ದೇವೆಯೇ? ನಾವಿದ್ದಾಗಲೂ ಕೊಟ್ಟಿದ್ದೆವು, ನೀವೂ ಕೊಡುತ್ತಿದ್ದೀರಿ. 17 ಪರ್ಸೆಂಟ್ ಟ್ಯಾಕ್ಸನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ಸರ್ಕಾರಕ್ಕೆ ತೆಗೆದುಕೊಳ್ಳುತ್ತಿದ್ದೇವೆ ಅಂದರೆ ಎಷ್ಟಾಯಿತು? ಒಂದು ದಿವಸಕ್ಕೆ ಒಂದರಿಂದ ಒಂದೂವರೆ ಕೋಟಿ ಕಲೆಕ್ಷನ್ ಆದರೆ ವರ್ಷಕ್ಕೆ 400 ಕೋಟಿ ಬರುತ್ತದೆ ಅದರ ಮೇಲೆ 17 ಪರ್ಸೆಂಟ್ ಎಂದರೆ ಎಷ್ಟಾಯಿತು? ಆದರೆ ಪ್ರೈವೇಟ್‌ನವರಿಂದ ಬರೀ 10 ಪರ್ಸೆಂಟ್ ತೆಗೆದುಕೊಳ್ಳುತಿದ್ದೇವೆ. 17 ಪರ್ಸೆಂಟ್ ಟ್ಯಾಕ್ಸನ್ನು ನಾವೇ ಮಾಡಿದ್ದುದು ಅದಕ್ಕೆ ಸದನದಲ್ಲಿ ಕಾರಣವನ್ನು ಹೇಳೋದಿಲ್ಲ ಸರ್ಕಾರಕ್ಕೆ ಪ್ರತ್ಯೇಕವಾಗಿ ಅಸಕ್ತಿ ಇದ್ದರೆ ಹೇಳ್ತಿನಿ ಏಕೆ ಮಾಡಿದ್ದೆವು ಎಂದು? 7 ಪರ್ಸೆಂಟ್ ಎಕ್ಸ್‌ಟ್ರಾ ಕೊಡ್ತಾ ಇದ್ದಾರೆ ಮತ್ತೆ ಪ್ರೈವೇಟ್ ಅಪರೇಟರ್ಸ್ ಚೀಟ್ ಮಾಡುತ್ತಾ ಇದ್ದಾರೆ. 50 ಬಸ್‌ಗಳಲ್ಲಿ 30ಕ್ಕೆ ಕಟ್ಟುತ್ತಾರೆ ಇನ್ನು 20ಕ್ಕೆ ಕಟ್ಟೋದಿಲ್ಲ.

ಶ್ರೀ ಆರ್.ಎನ್. ನಾಯಕ್ : ಅವರು 50 ಜನರ ಪರ್ಮಿಟ್‌ನಲ್ಲಿ 100 ಜನ ತುಂಬುತ್ತಾರೆ ಹಾಗೇ ನಿಮ್ಮ ಕೆ.ಎಸ್.ಆರ್.ಟಿ.ಸಿ.ಯವರು 120 ಜನ ತುಂಬುತ್ತಾರೆ. ಒಂದೊಂದು ಬಸ್‌ಗೆ ಸೀಟುಗಳೇ ಇಲ್ಲ ಏನು ಮಾಡುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಸರ್ಕಾರವನ್ನು ಅದರ ಅಂಗಸಂಸ್ಥೆಗಳನ್ನು ವಿರೋಧಪಕ್ಷದವರು ಡಿಫೆಂಡ್ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದೆ. ಇದಕ್ಕೆ ಕಾರಣ ಏನು ಎಂದು ಯೋಚನೆ ಮಾಡಿ. ಇದನ್ನು ಸವಾಲಾಗಿ ಒಡ್ಡುತ್ತಿದ್ದೇನೆ. ಒಂದು ವರ್ಷ ನೀವು ನಾನು ಹೇಳಿದ ಹಾಗೆ ಕೆ.ಎಸ್.ಆರ್.ಟಿ.ಸಿ. ನಡೆಸಿರಿ ಅದು ಏಕೆ ನಷ್ಟ ಆಗ್ತದೋ ನೋಡ್ತಿನಿ. ನಮಗೆ ಆ ವಿಲ್ ಇಲ್ಲ. ಪ್ರೈವೇಟ್‌ನವರಿಗೆ ಕೊಡಬೇಕೂಂತ ಇದ್ದೀರಾ ಅಲ್ಲವೇ? ಹೌದು, ಮಂಗಳೂರಿನಲ್ಲಿ, ಶಿವಮೊಗ್ಗದಲ್ಲಿ ಚೆನ್ನಾಗಿ ನಡೆಸುತ್ತಾ ಇಲ್ಲ ಅಂಥ ಹೇಳ್ತಾ ಇಲ್ಲ. ಏರಿಯಾವೈಸ್ ಕೊಡಿ ಯಾರು ಬೇಡ ಅಂತಾರೆ ಆದರೆ ಇವತ್ತು ನೀವು ಹೊರಟಿರುವುದು ರೂಟ್‌ವೈಸ್ ಕೊಡುವುದಕ್ಕೆ ಎಂಬುದು ನಿಮಗಿನ್ನೂ ಅರ್ಥವಾಗಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಇರುವ ಬಸ್‌ಗಳನ್ನು ಪ್ರೈವೇಟ್‌ನವರಿಗೆ ಕೊಡಬೇಕೆಂದು ನಮ್ಮ ಉದ್ದೇಶವಲ್ಲ ಈಗ ಕೆ.ಎಸ್.ಆರ್.ಟಿ.ಸಿ.ಯನ್ನು ಸರಿಮಾಡಿ ಎಲ್ಲೆಲ್ಲಿ ಡಿಸ್ಟ್ರಿಕ್ಟ್‌ನಲ್ಲಿ ನ್ಯಾಷನಲೈಸ್ ಮಾಡಿದ್ದೇವೆ ಅಲ್ಲಿಗೆಲ್ಲ ಬಸ್ ಕೊಟ್ಟು ಅನಂತರ ಹೊಸದಾಗಿ ಹೋಗಬೇಕೇ ಹೊರತು ಈಗ ಗುಲ್ಬರ್ಗ ಬೀದರ್‌ನಲ್ಲಿ ಸಾಕಷ್ಟು ಬಸ್ ಕೊಡದೆ ಹೋದರೆ ತೊಂದರೆಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸರಿ ನೀವು ಉತ್ತರ ಕೊಡುವಾಗ ಕೊಡಿ ನಾನು ಏನು ಕನ್‌ವಿನ್ಸ್ ಮಾಡಲು ಪ್ರಯತ್ನಿಸುತ್ತಿದ್ದೇನೆಂದರೆ ಪ್ರೈವೇಟ್‌ನವರು ಬೆಂಗಳೂರಿನಿಂದ ಮಂಗಳೂರು, ಬೆಂಗಳೂರಿನಿಂದ ಗುಲ್ಬರ್ಗ, ಬೆಳಗಾಂ, ಮೈಸೂರು ಕೇಳುತ್ತಾರೆ. ಗುಲ್ಬರ್ಗ, ರಾಯಚೂರು, ಸಿಂಧನೂರು ಹಳ್ಳಿಗಳಲ್ಲಿ ಓಡಿಸ್ತೀವಿ ಎಂದು ಯಾರೂ ಬರುವುದಿಲ್ಲ? ಪ್ರೈವೇಟ್‌ನವರಿಗೆ ಕೊಡಬೇಕೆಂದು ನೀವು ಹೇಳುವುದಾದರೆ ಬಿ.ಟಿ.ಎಸ್. ಅನ್ನು ಕೊಡುತ್ತೇವೆಂದು ಹೇಳಿ ಆಗ ನೋಡೋಣ ಯಾರು ಬರ್ತಾರೆ? ಅದನ್ನು ರನ್ ಮಾಡಲು ಯಾವ ಪ್ರೈವೇಟ್‌ನವರು ಬರುವುದಿಲ್ಲ. ಇವತ್ತು ಮಂಗಳೂರಿನಲ್ಲಿ ಸಿಟಿ ಸರ್ವಿಸ್ ಆಪರೇಟ್ ಮಾಡಿದರೂ ಒಂದು ಸಿಟಿ ರೂಟಿಗೆ ಒಂದು

ಲಾಂಗ್‌ರೂಟ್ ಅವರಿಗೆ ಕೊಡಬೇಕು ಇಲ್ಲದಿದ್ದರೆ ಬರೀ ಸಿಟಿ ರೂಟ್‌ನ್ನು ರನ್ ಮಾಡಲು ಯಾರೂ ತಯಾರಿಲ್ಲ. ಇದನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ಬಹಳ ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ನೀವು ರಾಜ್ಯದ ಹಿತದೃಷ್ಟಿಗೆ ಧಕ್ಕೆ ಬರುವ ರೀತಿ ಖಾಸಗಿಯವರಿಗೆ ಸಹಾಯ ಮಾಡಬೇಕೆಂದು ಶಾರ್ಟ್‌ಕಟ್‌ರಾಗಿ ಏನು ಮಾಡುತ್ತಿದ್ದೀರಿ ಅದನ್ನು ತಕ್ಷಣ ನಿಲ್ಲಿಸಿ ಒಂದು ಸದನದ ಸಮಿತಿ ರಚನೆ ಮಾಡಿ. ನಾವು ನಿಮಗೆ ಸಲಹೆ ಕೊಡುತ್ತೇವೆ. ನಿಮಗೆ ಕನ್ವಿನ್ಸ್ ಮಾಡುವ ವಿಶ್ವಾಸ ನನಗಿದೆ. ಕೆ.ಎಸ್.ಆರ್.ಟಿ.ಸಿ. ಲಾಸಾಗಲು ಕಾರಣವೇ ಇಲ್ಲ. ಸಾಧಿಸುವ ಲೀಡರ್‌ಷಿಪ್ ಬೇಕು ಸಚಿವರೇ ನಾನು 120 ಕಿ.ಮೀ. ಸ್ಪೀಡಿನಲ್ಲಿ ಹೋಗ್ತೀನಿ. ಅಂತ ಹೇಳಿದರೆ ಇನ್ನು ಡ್ರೈವರ್ ಏನು ಮಾಡುತ್ತಾರೆ? ಅವನೂ ಮಾಡ್ತಾನೆ? ಇದನ್ನು ಸರ್ಕಾರ ತಿಳಿದುಕೊಳ್ಳಬೇಕು. ಎಷ್ಟು ಡಿಪೋಗಳಿಗೆ ಭೇಟಿ ಕೊಟ್ಟಿದ್ದಾರೆ ಇವರು ಎಷ್ಟೋ ಡಿವಿಜನ್‌ಗಳನ್ನು ರಿವ್ಯೂ ಮಾಡಿದ್ದಾರೆ. ಇವರು ಎಷ್ಟು ಕಡೆ ಅರ್ನಿಂಗ್ಸ್ ಜಾಸ್ತಿಯಾಗಿದೆ ಎಂದು ವಿಚಾರ ಮಾಡಿದ್ದಾರೆ? ಇದ್ಯಾವುದನ್ನೂ ಮಾಡಿಲ್ಲ ಇವತ್ತು ಅವರು ಕಿಮ್ಕೋ ಫ್ಯಾಕ್ಟರಿ ಬಗ್ಗೆ ಹೇಳಿಕೆ ಕೊಟ್ಟರು. ನಾನು ಹೇಳುತ್ತ ಇದ್ದೇನೆ. ರೆಕಾರ್ಡ್‌ನಲ್ಲಿದೆ 1986-87, 87-88, 88-89ರಲ್ಲಿ 200ರಿಂದ 300 ಬಸ್‌ಗಳನ್ನು ನಾವು ಕೊಡ್ತಾ ಇದ್ದೆವು. ಈಗ್ಯಾಕೆ ನೀವು ನಾಲ್ಕು ಐದಕ್ಕೆ ಇಳಿಸಿದ್ದೀರಿ. ಅಂದರೆ ಪ್ರೈವೇಟ್ ಬಾಡಿ ಬಿಲ್ಡರ್ಸ್‌ಗೆ ಕೊಡಬೇಕು ಅಂತ ತಾನೇ? ನಮ್ಮಲ್ಲಿ ಒಳ್ಳೆಯ ಕಾರ್ಮಿಕರಿಲ್ಲವೇ? ಇದನ್ನು ನೀವು ತಿಳಿದುಕೊಳ್ಳಬೇಕು. ಸ್ಟಾಫ್ ಅಂಡ್ ವರ್ಕರ್ ಟ್ರೇಡ್‌ನವರು ಸರ್ಕಾರವನ್ನು ಭೇಟಿ ಮಾಡಿ ಮನವಿ ಕೊಡಬೇಕು ಎಂದಿದ್ದಾರೆ ನಾವು ನಿಮಗೆ ವಿವರ ಕೊಟ್ಟಿದ್ದೇನೆ. ಸುಮಾರು 36,000 ಕಾರ್ಮಿಕರು ಐಡೆಂಟಿಫಿಕೇಷನ್ ಕೊಟ್ಟು ಸೈನ್ ಮಾಡಿ ಸರ್ಕಾರದ ಕ್ರಮವನ್ನು ಖಂಡನೆ ಮಾಡಿರುವುದರ ಕಡೆ ಗಮನ ಸೆಳೆಯುತ್ತಾ ನಾವು ಏನು ಪ್ರೈವೇಟ್‌ನವರಿಗೆ ಏನು ಕೊಡಬೇಕೆಂದರೆ ಟ್ರಕ್ ಟರ್ಮಿನಲ್ಲಿವೆ ಕೊಡಿ ಯಾರು ಬೇಡಾಂತಾರೆ ಆಕ್ಸಿಡೆಂಟ್ಸ್ ಜಾಸ್ತಿ ಆಗುತ್ತಾ ಇರುವುದು ಎಲ್ಲರಿಗೂ ಗೊತ್ತಿದೆ.

ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ಮೈಸೂರುಗಳ ಸುತ್ತಮುತ್ತ ಹುಬ್ಬಳ್ಳಿ ಮಂಗಳೂರು ಸುತ್ತಮುತ್ತ ಜಮೀನನ್ನು ಅಕ್ವೈರ್ ಮಾಡಿ ಟ್ರಕ್‌ಗಳನ್ನು ನಿಲ್ಲಿಸಲಿಕ್ಕೆ ಸಿಟಿ ಒಳಕ್ಕೆ ಟ್ರಕ್ಸ್ ಬರದಂತೆ ನಾವು ಕ್ರಮ ಕೈಗೊಳ್ಳಬೇಕೆಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದೆವು ಬೆಂಗಳೂರಿನಲ್ಲಿ ನಲವತ್ತೈದು ಎಕರೆ ಜಮೀನಿದೆ ಅದನ್ಯಾಕೆ ನೀವು ಪ್ರೈವೇಟ್‌ನವರಿಗೆ ಕೊಡಿಸಿ ಮಾಡಿಸಬಾರದು? ಇವತ್ತು ಹೇಳಿದಿರಿ ಎಕ್ಸ್‌ಪ್ರೆಸ್ ರೋಡ್‌ಗಳನ್ನು ಕಟ್ಟಲಿಕ್ಕೆ ಪ್ರೈವೇಟ್‌ನವರಿಗೆ ಕೊಡ್ತೀವಿ ಅಂತ ವೆಲ್ಕಂ ಮಾಡ್ತೀವಿ ಅದನ್ನು ಯಾರು ಪ್ರೈವೇಟ್‌ನವರು ಬರ್ತಾರೆ ಅದನ್ನು ಮಾಡಲಿಕ್ಕೆ ಎಲ್ಲಿ ಸರ್ಕಾರದ ಪುಗಸಟ್ಟೆ ದುಡ್ಡು ಸಿಗ್ತದೆ ಅಲ್ಲಿ ಬರ್ತಾರೆಯೇ ಹೊರತು ಅವರ ಕೈಯಿಂದ ಖರ್ಚು ಮಾಡಲು ಬರುವುದಿಲ್ಲ. ಇದನ್ನು ನಾನು ಸ್ವಾಗತ ಮಾಡುತ್ತಾ ಇದ್ದೇನೆ.

ಆದರೆ ತಾವು ಏನು ಪ್ರೈವೇಟೈಸೇಷನ್ ಮಾಡಲಿಕ್ಕೆ ಹೊರಟಿದ್ದೀರಿ, ಅದು ಏನಾಗಿದೆ? ನಿಮ್ಮ ಕೆ.ಎಸ್.ಆರ್.ಟಿ.ಸಿ. ಎಫಿಶಿಯನ್‌ಸಿ ಕಂಪ್ಲೀಟ್ ಆಗಿ ಕಡಿಮೆಯಾಗಿ ಜನಗಳು ವಿಶ್ವಾಸ ಹೋಗುವ ರೀತಿ ಸರ್ಕಾರ ಮಾಡಿದೆಯೆಂದು ನಾನು ಆಪಾದನೆ ಮಾಡಬೇಕಾಗಿದೆ. ಬಹಳ ಮುಖ್ಯವಾಗಿ ಸಮಾಜವಾದಿ ತತ್ವ ನಂಬಿರುವ ಮುಖ್ಯಮಂತ್ರಿಗಳು ಶ್ರೀ ಸಾಮಾನ್ಯನ ಬಡವನ ವಿರುದ್ಧವಿರುವ ಬಜೆಟ್ ಮಂಡನೆ ಮಾಡುತ್ತೀರೆಂದು ನಾನಂತೂ ನಿರೀಕ್ಷೆ ಮಾಡಿರಲಿಲ್ಲ. ಬಹಳ ಮುಖ್ಯವಾಗಿ ಯಾರು ಇವರಿಗೆ ಗೈಡ್ ಮಾಡ್ತಾರೋ ನನಗಂತೂ ಅರ್ಥವಾಗುವುದಿಲ್ಲ. ಪೇಜ್ 83ರಲ್ಲಿ ಲೈಸೆನ್ಸ್ ಫೀಸನ್ನು ಹೆಚ್ಚು ಮಾಡಿದ್ದಾರೆ. ಸಿ.ಎಲ್ಓ ಒಂದು ಹೋಲ್‌ಸೇಲ್ ಲೈಸೆನ್ಸ್, 50 ಸಾವಿರದಿಂದ ಒಂದು ಲಕ್ಷಕ್ಕೆ ಜಾಸ್ತಿ ಮಾಡಿದ್ದೀರಿ. ಸರಿ ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅವರಿಗೆ ಪ್ರಾಫಿಟ್ ಇದೆ. ನೀವು ಎರಡು ಲಕ್ಷ ಮಾಡಿ ನನ್ನ ತಕರಾರಿಲ್ಲ. ಆದರೆ

ಸಿಎಲ್‌ಟು ಲೈಸೆನ್ಸ್‌ನ್ನು ಒಂದೇ ಸಲ 30 ಸಾವಿರದಿಂದ ಒಂದು ಲಕ್ಷಕ್ಕೆ ಏರಿಸಿದ್ದಾರೆ. ಸೆಕೆಂಡ್ಸ್ ಮಾರಾಟವನ್ನು ಅವರು ಮಾಡಲಿ, ಅದರಿಂದ ಏನಾದರೂ ದುಡ್ಡು ಕೊಡಲಿ ಎಂದು ಮಾಡಿದ್ದೀರಾ? ಯಾವ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ? ಈ ಆಫೀಸರ್ಸ್ ಏನು ಯೋಚನೆ ಮಾಡಿದ್ದಾರೆ, ಎಂದು ನನಗಂತೂ ಅರ್ಥವಾಗುವುದಿಲ್ಲ. ಇವತ್ತು ರೀಟೈಲ್ ಶಾಪ್ಸ್‌ಗಳ ಮೇಲೆ, ಸಿಎಲ್‌ಟು ಶಾಪ್ಸ್‌ಗಳ ಮೇಲೆ ನೀವು ಹಾಕಿರತಕ್ಕಂಥ ಲೈಸೆನ್ಸಿಂಗ್ ಸ್ಟ್ರಕ್ಚರ್ ಏನು ಇದೆ, ಅದನ್ನು ನೀವು ಬದಲಾವಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಡಾ. ಜೀವರಾಜ ಆಳ್ವ : ಮಾನ್ಯ ಮಿತ್ರರಿಗೆ ಒಂದು ಸಲಹೆ. ಇನ್ನು ಮುಂದೆ ವ್ಯವಹಾರವನ್ನು ನಡೆಸಿ, ವಿರೋಧಪಕ್ಷದವರು ಹೇಳಿದರು, ಅದಕ್ಕೋಸ್ಕರ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆಂದು ಮತ್ತೆ ನನಗೆ ಹೆದರಿಕೆ.

ಶ್ರೀ ಆರ್.ಎನ್. ನಾಯಕ್ : ಇದನ್ನು ನೀವು ಮೊದಲು ಮಾಡಿದ್ದೀರಿ ತಾನೆ? ವ್ಯವಹಾರ ಎಂದರೇನು? ವ್ಯವಹಾರ ಅಂದರೆ ಏನು ಎಂಬುದೇ ನಮಗೆ ಗೊತ್ತಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವ್ಯವಹಾರ ಅಂದರೆ ವ್ಯವಹಾರ. ಅದು ಅರ್ಥ ಆಗುವುದಕ್ಕೆ ಏನು ಇದೆ? ನಿಮಗೆಲ್ಲಾ ಅರ್ಥವಾಗಿದೆ. ಅದು ನನಗೆ ಗೊತ್ತಿದೆ.

ಶ್ರೀ ಆರ್.ಎನ್. ನಾಯಕ್ : ಇದನ್ನು ನೀವು ಹಿಂದೆ ಮಾಡಿಬಿಟ್ಟಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಬಜೆಟ್‌ನಲ್ಲಿ ಕಾರ್ಮಿಕರ ಬಗ್ಗೆ ಒಂದು ಚಕಾರ ಶಬ್ದ ಕೂಡ ಇಲ್ಲ. ದುಡಿಯುವ ವರ್ಗದ ಬಗ್ಗೆ ಒಂದು ಚಕಾರವನ್ನು ಎತ್ತಲಿಲ್ಲ. ಇವರಿಗೆ ಏನಾಗಿದೆ ಎಂದು ನನಗೆ ಅರ್ಥವಾಗಲಿಲ್ಲ. ಈಗ ನಮ್ಮ ಕೆ.ಹೆಚ್. ಪಾಟೀಲರು ಕಾರ್ಮಿಕ ಇಲಾಖೆಯ ಮಂತ್ರಿಗಳಾಗಿ ತಾವು ಸ್ವಲ್ಪ ದಿನ ಕೆಲಸವನ್ನು ಮಾಡಿದ್ದೀರಿ. ಹಾಗೆಯೇ ಕೆಲವು ಪ್ರಯತ್ನವನ್ನು ತಾವು ಮಾಡಿದ್ದೀರಿ. ಈಗ ಈ ಮಿನಿಮಮ್ ವೇಜಸ್ ಫಿಕ್ಸ್ ಮಾಡುವ ದೃಷ್ಟಿಯಲ್ಲಿ ಸರ್ಕಾರದ ನೀತಿ ಕಳೆದ ನಾಲ್ಕೈದು ತಿಂಗಳಲ್ಲಿ ಸಂಪೂರ್ಣವಾಗಿ ಅದು ಸ್ಥಗಿತವಾಗಿದೆ. ತಾವು ಈ ಇಲಾಖೆಯನ್ನು ಬಿಟ್ಟಮೇಲೆ ಸಂಪೂರ್ಣವಾಗಿ ಅದು ನಿಂತುಹೋಗಿದೆ. ಈಗ ಅವರು ಏನು ಕೇಳುತ್ತಿದ್ದಾರೆ, 1990ರಲ್ಲಿ ಆಗ ತಾವು ಮಂತ್ರಿಗಳಾಗಿದ್ದೀರಿ ಎಂದು ಕಾಣುತ್ತದೆ. ಮೇ, ಜೂನ್, ತಿಂಗಳಲ್ಲಿ ಅಡ್ವೈಸರಿ ಬೋರ್ಡ್‌ನ್ನು ರೀಕಾನ್ಸ್‌ಟಿಟ್ಯೂಟ್ ಮಾಡಿದರು. ನಮ್ಮ ಸರ್ಕಾರದಲ್ಲಿ ಮಾಡಿದ್ದು. ಅದಾದಮೇಲೆ ರೀಕಾನ್ಸ್‌ಟಿಟ್ಯೂಟ್ ಮಾಡಿದರು. ಅದು ನಿಮ್ಮ ಹಕ್ಕು. ನಿಮಗೆ ಯಾರು ಬೇಕೋ ಅವರನ್ನು ಹಾಕಿಕೊಂಡಿದ್ದೀರಿ. ಐದು ಜನ ಅಫಿಶಿಯಲ್ಸ್, ಮೂರು ಜನ ನಾನ್ ಅಫೀಶಿಯಲ್ಸ್. ಇವರು ಕೆಲವು ರೆಕಮೆಂಡೇಷನ್ಸ್ ಮಾಡಿದ್ದಾರೆ. ಯಾವ ಆಧಾರದಮೇಲೆ ಅವರು ರೆಕ್‌ಮೆಂಡೇಷನನ್ನು ಮಾಡಿದ್ದಾರೆ.

ನಿಮ್ಮ ಸ್ಟೇಟ್ ಲೇಬರ್ ಡಿಪಾರ್ಟ್‌ಮೆಂಟ್‌ನವರು, ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನವರು, ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು, ಪ್ಲಾನಿಂಗ್ ಕಮೀಷನ್‌ರವರ ರೆಕಮೆಂಡೇಷನ್, ಇದರ ಆಧಾರದಮೇಲೆ ಸುಮಾರು 16 ಎಂಪ್ಲಾಯ್‌ಮೆಂಟ್ಸ್‌ನಲ್ಲಿ ಮಿನಿಮಮ್ ವೇಜಸ್‌ನ್ನು ಫಿಕ್ಸ್ ಮಾಡಿ ಎಂದು ರೆಕಮೆಂಡ್ ಮಾಡಿದ್ದಾರೆ. ಪ್ರೈವೇಟ್ ಸ್ಕೂಲುಗಳು, ಖಂಡಸಾರಿ, ಪ್ಲಾಂಟೇಷನ್ ಲೇಬರರ್ಸ್, ಬೀಡಿ ಕಾರ್ಮಿಕರು, ಪಬ್ಲಿಕ್ ಮೆಟ್ರೋ ಟ್ರಾನ್ಸ್‌ಪೋರ್ಟ್, ಪೆಟ್ರೋಲ್ ಅಂಡ್ ಡೀಸಲ್ ಪಂಪ್ಸ್, ಟಾಡಿ ಟ್ಯಾಪಿಂಗ್, ಆಯಿಲ್ ಮಿಲ್ಸ್, ಫೌಂಡ್ರಿ, ಸಿನಿಮಾ, ಇವೆಲ್ಲವನ್ನೂ ಮಿನಿಮಮ್ ವೇಜಸ್‌ಗೆ ಫಿಕ್ಸ್ ಮಾಡಬೇಕು ಎಂದು ಹೇಳಿ ರೆಕಮೆಂಡ್ ಮಾಡಿದ್ದಾರೆ. ಅವರು ಎಷ್ಟು ಮಾಡಿದ್ದಾರೆ? ಇದನ್ನು ತಾವು ಗಮನಿಸಬೇಕು. ಅಡ್ವೈಸರಿ ಕೌನ್ಸಿಲ್‌ನ ರೆಕಮೆಂಡೇಷನ್ ಏನು ಇದೆ ಎಂದು

ಹೇಳಿದರೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರತಕ್ಕಂಥವರಿಗೆ 660 ರೂಪಾಯಿ ತಿಂಗಳಿಗೆ, ಅಂದರೆ ದಿನಕ್ಕೆ 20-21 ರೂಪಾಯಿ ಆಗುತ್ತದೆ. ಹೊರಗಡೆ ಕೆಲಸ ಮಾಡತಕ್ಕಂಥವರಿಗೆ 20ರೂಪಾಯಿ ಆಗುತ್ತದೆ. ಇದು ಬಹಳ ಕಡಿಮೆ. ಇವತ್ತಿನ ಜೀವನದ ಅವಶ್ಯಕತೆಗಳನ್ನು ನೋಡಿದಾಗ ಇದು ಬಹಳ ಕಡಿಮೆ. ಇದನ್ನಾದರೂ ಕೂಡ ಅಕ್ಸೆಪ್ಟ್ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆಯೇ? ಇದನ್ನೂ ಕೂಡಾ ಸರ್ಕಾರ ಇವತ್ತು ಮಾಡುತ್ತಿಲ್ಲ.

ಕಳೆದ ಆರು ತಿಂಗಳಿಂದ ಮಿನಿಮಮ್ ವೇಜಸ್‌ನ್ನು ಫಿಕ್ಸ್ ಮಾಡಲಿಕ್ಕೆ ಸರ್ಕಾರಕ್ಕೆ ಆಗಿರತಕ್ಕಂಥ ತೊಂದರೆಯೇನು? ನನಗಂತೂ ಅದು ಅರ್ಥವಾಗುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ನಿಮ್ಮ ಸರ್ಕಾರದಲ್ಲಿ ಈ ಪ್ಲಾಂಟೇಷನ್ ಪರವಾಗಿರತಕ್ಕಂಥ ಜನ ಇದ್ದಾರೆ. ಪ್ಲಾಂಟೇಷನ್ ಮಾಲೀಕರುಗಳ ಪರವಾಗಿರತಕ್ಕಂಥ ಜನ ನಿಮ್ಮ ಸರ್ಕಾರದಲ್ಲಿ ಇದ್ದಾರೆ. ಬೀಡಿ ಫ್ಯಾಕ್ಟರಿಗಳ ಮಾಲೀಕರ ಪರವಾಗಿರತಕ್ಕಂಥ ಜನ ನಿಮ್ಮ ಕ್ಯಾಬಿನೆಟ್‌ನಲ್ಲಿ ಇದ್ದಾರೆ. ಅವರು ನಿಮ್ಮನ್ನು ಮಿನಿಮಮ್ ವೇಜಸ್‌ನ್ನು ಫಿಕ್ಸ್ ಮಾಡುವುದಕ್ಕೆ ಬಿಡುತ್ತಿಲ್ಲ. ನಿಮ್ಮ ಸರ್ಕಾರವನ್ನು ಫಿಕ್ಸ್ ಮಾಡುವುದಕ್ಕೆ ಬಿಡುತ್ತಿಲ್ಲ. ನಾನು ವಿಶೇಷವಾಗಿ ಒತ್ತಾಯ ಮಾಡುತ್ತಿದ್ದೇನೆ. ಈ ಬೀಡಿ ಕಾರ್ಮಿಕರ ಒಂದು ದುಸ್ಥಿತಿ ಏನು ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಬಿ.ಎಂ. ಇದಿನಬ್ಬ : ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಜೋರುಂಟು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಕೂಡ ಧ್ವನಿಗೂಡಿಸಿ ಸ್ವಾಮಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ, ಬೆಂಗಳೂರು, ಮೈಸೂರು ಎಲ್ಲಾ ಜಿಲ್ಲೆಗಳಲ್ಲಿಯೂ ಸಹಿತ ಮಿನಿಮಮ್ ವೇಜಸನ್ನು ಫಿಕ್ಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ. ಇವರ ಒಂದು ಶಾಪ ನಿಮ್ಮ ಸರ್ಕಾರಕ್ಕೆ ಸಧ್ಯದಲ್ಲಿಯೇ ತಗಲುತ್ತದೆ. ಇದಾದಮೇಲೆ ಪ್ಲಾಂಟೇಷನ್ ಲಾಬಿ, ಪ್ಲಾಂಟೇಷನ್ ಮಾಲೀಕರುಗಳು ನಿಮಗೆ ಏನಾದರೂ ವ್ಯವಹಾರದ ಒಂದು ವಾಸನೆಯನ್ನು ಕೊಟ್ಟಿದ್ದಾರೆಯೇ? ಏತಕ್ಕೆ ಅವರಿಗೆ ಮಿನಿಮಮ್ ವೇಜಸನ್ನು ಫಿಕ್ಸ್ ಮಾಡುತ್ತಿಲ್ಲ. ಈ ಕಾರ್ಮಿಕರ ವಿರೋಧಿ ನೀತಿಯನ್ನು ನಾನು ಖಂಡನೆ ಮಾಡುತ್ತಿದ್ದೇನೆ. ಈ ಮಿನಿಮಮ್ ವೇಜಸ್ ಅಡ್ವೈಸರಿ ಬೋರ್ಡ್ ಏನು ಇದೆ, ಅದನ್ನು ಈಗ ರೀ-ಕಾನ್ಸ್‌ಟಿಟ್ಯೂಟ್ ಮಾಡಲಿಕ್ಕೆ ಹೊರಟಿದ್ದಾರೆ. ಏಕೆ? ಕೆ.ಹೆಚ್. ಪಾಟೀಲರು ಇದರ ಪರವಾಗಿದ್ದಾರೆ ಎಂತಲೆ? ಮಾನ್ಯ ಸಹಕಾರ ಮಂತ್ರಿಗಳೇ, ಈ ಅಡ್ವೈಸರಿ ಬೋರ್ಡನ್ನು ರೀ-ಕಾನ್ಸ್‌ಟೀಟ್ಯೂಟ್ ಮಾಡುವುದಕ್ಕೆ ಹೊರಟಿದ್ದಾರೆ. ನಿಮ್ಮ ಪಕ್ಷದ ಕಾರ್ಯಕರ್ತರು ಅಲ್ಲವೇ? ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಅಲ್ಲವೇ? ಹಿಂದುಳಿದ ವರ್ಗದವರು ಅಲ್ಲವೇ? ಅವರೇ ರೆಕಮಂಡ್ ಮಾಡಿರುವುದು. ಇನ್ನೊಂದು ಏನು ಮಾಡುತ್ತಾರೆ ಅಂದರೆ ಇನ್ನು ಆರು ತಿಂಗಳು ಮುಂದೆ ಹಾಕುತ್ತಾರೆ. ಚುನಾವಣೆ ಬಂತು. ನಿಮಗೆ ಹಣಬೇಕು ಅಂತನಾ? ಏಕೆ ನೀವು ಫಿಕ್ಸ್ ಮಾಡಲಿಕ್ಕೆ ಹೋಗುತ್ತಿಲ್ಲ? ಏತಕ್ಕೆ ಇದನ್ನು ಮಾಡಲಿಲ್ಲ ಹೇಳಿ.

ಛೇರ್ಮನ್ : ವ್ಯವಹಾರ ಎಂಬ ಶಬ್ದದ ಅರ್ಥ ಹೇಳಿ?

ಶ್ರೀ ಕೆ.ಜೆ. ಜಾರ್ಜ್ : ನೀವು ಸರ್ಕಾರವನ್ನು ನಡೆಸಿದವರು, ನೀವು ಮಂತ್ರಿಯಾಗಿದ್ದವರು, ನಿಮ್ಮ ಎಲ್ಲಾ ಆರ್ಡರಿಗೂ ವ್ಯವಹಾರ ನಡೆದಿದೆಯೇ? ಪ್ರತಿಯೊಂದಕ್ಕೂ ವ್ಯವಹಾರ ವ್ಯವಹಾರ ಎಂದು ಹೇಳಿಕೊಂಡು ಇದ್ದರೆ, ವ್ಯವಹಾರದ ಮಹತ್ವ ಹೋಗಿಬಿಡುತ್ತದೆ.

ಡಾ|| ಜೀವರಾಜ ಆಳ್ವ : ಈ ರೀತಿಯ ಘಟನೆಗಳು ನಡೆದಿಲ್ಲವೆಂಬ ಅಂಶ ಹೇಳುತ್ತಿದ್ದಾರೆ.

ಶ್ರೀ ಕೆ.ಜಿ. ಜಾರ್ಜ್ : ಪ್ರತಿಯೊಂದು ವಿಚಾರಕ್ಕೂ ಪ್ರತಿಯೊಂದು ಹೆಜ್ಜೆಹೆಜ್ಜೆಗೂ ವ್ಯವಹಾರ ವ್ಯವಹಾರ ಎಂದು ಕೇಳಿಕೊಂಡು ಇದ್ದರೆ ವ್ಯವಹಾರದ ಅರ್ಥವೇ ಹೋಗಿಬಿಡುತ್ತದೆ.

ಛೇರ್ಮನ್ : ವ್ಯವಹಾರ ಎಂಬ ಶಬ್ಧದ ಅರ್ಥ ಬಹಳ ಸ್ಥೂಲವಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದರ ಅರ್ಥ ನನಗೆ ಗೊತ್ತಿಲ್ಲ. ಇದರ ಗುಟ್ಟು ಏನಿರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾರ್ಮಿಕರ ಕಲ್ಯಾಣದ ಬಗ್ಗೆ ಅವರ ವೇಜಸ್ ಬಗ್ಗೆ ಮತ್ತು ರಾಜ್ಯದಲ್ಲಿ ಮುಚ್ಚಿರತಕ್ಕ ಫ್ಯಾಕ್ಟರಿಯ ಬಗ್ಗೆ ಒಂದು ವಿಚಾರವೂ ಕೂಡ ಈ ಬಜೆಟ್‌ನಲ್ಲಿಲ್ಲ. ಇದು ಬಹಳ ಖೇದವಾದ ಸಂಗತಿಯಾಗಿದೆ. ಹೋಟೆಲ್ ತಿಂಡಿಗಳ ಬೆಲೆಗಳು ಇಷ್ಟೊಂದು ಜಾಸ್ತಿಯಾಗುತ್ತಿವೆ. ಪ್ರತಿದಿನ ಕೂಡ ಕ್ವಾಂಟಿಟಿ ಕಡಿಮೆಯಾಗುತ್ತಿದೆ. ಆಹಾರ ಮತ್ತು ನಾಗರಿಕ ಇಲಾಖೆಯ ಮಂತ್ರಿಗಳು ಏನು ಮಾಡುತ್ತಿದ್ದಾರೆಂದು ದಯವಿಟ್ಟು ಹೇಳಿ. ಕಳೆದ 6 ತಿಂಗಳ ಹಿಂದೆ ಈ ಹೋಟೆಲ್ ಮಾಲೀಕರುಗಳನ್ನು ಇವರು ಕರೆಯಿಸಿ ಮಾತನಾಡಿದ್ದಾರೆ. ಕಾಫಿ ಲೋಟದಲ್ಲಿ ಏನಪ್ಪ ಇಷ್ಟು ತುಂಬಾ ಕಾಫಿ ಕೊಟ್ಟಿದ್ದಾರೆ ಅಂತ ನೋಡಿದರೆ ಕೆಳಗಡೆ ತೂತು ಇರುತ್ತದೆ. ಅದರಲ್ಲಿ ಕಾಫಿ ಇರುವುದು 2-3 ಸ್ಪೂನ್ ಮಾತ್ರ ಇರುತ್ತದೆ. ಸಾಮಾನ್ಯವಾಗಿರತಕ್ಕ ಹೋಟೆಲ್‌ನಲ್ಲಿ ಒಂದು ಕಾಫಿಯ ಬೆಲೆ 4 ರಿಂದ 6 ರೂಪಾಯಿ ಇದೆ. ಒಂದು ಮಸಾಲೆ ದೋಸೆಯ ಬೆಲೆ 9 ರೂಪಾಯಿ ಇದೆ. ಒಂದು ಇಡ್ಲಿಯನ್ನು ತಿನ್ನಬೇಕಾದರೆ ಒಂದು ಸಾಮಾನ್ಯ ಹೋಟೆಲ್‌ನಲ್ಲಿ ಮೂರು ರೂಪಾಯಿ ಇದೆ. ಪಂಚತಾರಾ ಹೋಟೆಲ್‌ನಲ್ಲಿ ಈ ರೇಟ್ ಇಲ್ಲ. ಜನತಾ ಹೋಟೆಲ್ ಕಾಮತ್ ಹೋಟೆಲ್‌ನಲ್ಲಿ ಈ ರೇಟ್‌ಗಳನ್ನು ನಾವು ನೋಡುತ್ತಿದ್ದೇವೆ. ನಾನು ತಿಳಿದುಕೊಂಡೇ ಈ ಮಾತನ್ನು ಹೇಳುತ್ತಿರುವುದು. ಫುಟ್‌ಪಾತ್‌ನಲ್ಲಿರುವ ಹೋಟೆಲ್‌ನಲ್ಲಿಯೂ ಒಂದು ಇಡ್ಲಿಗೆ 2 ರೂಪಾಯಿ, ಒಂದು ಮಸಾಲೆ ದೋಸೆಗೆ 5 ರೂಪಾಯಿ, ಒಂದು ಕಾಫಿಗೆ 1-50 ರೂಪಾಯಿ ಕೊಡಬೇಕಾಗಿದೆ. ಇವತ್ತು ಜನಸಾಮಾನ್ಯರ ಪರಿಸ್ಥಿತಿ ಏನಾಗಿದೆ ಎಂಬುದನ್ನು ತಾವು ಯೋಚನೆ ಮಾಡಿ. ನೀವು ಎಷ್ಟು ಸಾರಿ ಹೋಟೆಲ್ ಮಾಲೀಕರನ್ನು ಕರೆಸಿದ್ದೀರಿ, ಅದನ್ನು ತಡೆಗಟ್ಟುವುದಕ್ಕೆ ಎಷ್ಟು ಸಾರಿ ಕ್ರಮ ತೆಗೆದುಕೊಂಡಿದ್ದೀರಿ? ಕ್ವಾಂಟಿಟಿ ಬಗ್ಗೆ ವಿಚಾರ ಮಾಡುತ್ತಿಲ್ಲ. ಕ್ವಾಂಟಿಟಿ ದಿನೇದಿನೇ ಕಡಿಮೆ ಆಗುತ್ತಿದೆ. ಕ್ವಾಲಿಟಿಯೂ ಹಾಳಾಗಿ ಹೋಗುತ್ತಿದೆ.

ಛೇರ್ಮನ್ : ಈಗ ಕ್ವಾಂಟಿಟಿ ಪ್ರಶ್ನೆ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬೆಲೆಗಳನ್ನು ಇಳಿಸುವುದಕ್ಕೆ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಏಕೆ ನಿಮ್ಮ ಸರ್ಕಾರ ಕ್ರಮ ಕೈಗೊಳ್ಳಬಾರದು? ಇನ್ನು ಅಕ್ಕಿ ಬೆಲೆ, ಬೇಳೆಬೆಲೆ, ಎಣ್ಣೆ ಬೆಲೆ ಇದನ್ನು ಹೇಳಿದರೆ ಕೇಂದ್ರ ಸರ್ಕಾರದವರು ಮೇಲೆ ಹಾಕುತ್ತೀರಾ? ನೀವು ಅಧಿಕಾರ ನಡೆಸಿದ್ದೀರಿ, ಆಗ ಏನು ಮಾಡಿದ್ದೀರಿ ಎನ್ನತಕ್ಕ ಮಾತನ್ನು ಹೇಳುತ್ತೀರಾ? ಆದರೆ ಜನಸಾಮಾನ್ಯರು ಜೀವನ ಮಾಡುವುದಕ್ಕೆ ಎಷ್ಟೊಂದು ಕಷ್ಟವಾಗಿದೆ? 2 ಸಾವಿರ ರೂಪಾಯಿ ಸಂಬಳ ಬರುವವರ ಪರಿಸ್ಥಿತಿ ಕಷ್ಟವಾಗಿದೆ. ಇದೇ ರೀತಿ ಅಭಾವ ಪರಿಸ್ಥಿತಿ ಮುಂದುವರೆದರೆ 1972-73ರಲ್ಲಿ ದಿವಂಗತ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹಳ್ಳಿಹಳ್ಳಿಯಲ್ಲಿ ಲೂಟಿಯಾಗುತ್ತಿತ್ತು. ಎಲ್ಲಾ ಪಟ್ಟಣಪ್ರದೇಶದಲ್ಲಿ ಲೂಟಿ ಪ್ರಾರಂಭವಾಗಿತ್ತು. ಹೋಟೆಲ್‌ಗಳಿಗೆ ಜನಗಳು ಹೋಗಿ ಲೂಟಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದರು. ಎಷ್ಟು ಪೊಲೀಸರು ಎಷ್ಟು ಅಧಿಕಾರಿಗಳು ತಡೆದರೂ ಅದನ್ನು ತಡೆಗಟ್ಟುವುದಕ್ಕೆ ಆಗಲಿಲ್ಲ. ಇದನ್ನು ಸರ್ಕಾರ

ಗಮನದಲ್ಲಿಟ್ಟುಕೊಳ್ಳಬೇಕೆಂದು ಬಹಳ ವಿನಯಪೂರ್ವಕವಾಗಿ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಆಗ್ರಹಪಡಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ತಮ್ಮ ರಚನಾತ್ಮಕವಾದ ಸಲಹೆ ಏನು? ನಿಯಂತ್ರಣ ಮಾಡಬೇಕೆಂದು ಹೇಳುತ್ತೀರೋ ಅಥವಾ ಯಾವ ರೀತಿಯಿಂದ ಮಾಡಿದರೆ ಸರಿಯಾದೀತು ಎಂದು ನಿಮ್ಮ ಅಭಿಪ್ರಾಯವಿದೆ? ಅವರು ಎಷ್ಟೆಷ್ಟು ಕ್ವಾಂಟಿಟಿ ಕೊಡುತ್ತಾರೆಂದು ಮಂತ್ರಿಗಳು ಹೋಗಿ ನೋಡಬೇಕೆಂದು ನಿಮ್ಮ ಅಭಿಪ್ರಾಯ ಇದೆಯೇ ಅಥವಾ ನಿಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಹೋಟೆಲ್‌ಗಳಲ್ಲಿ ಇಷ್ಟು ಕ್ವಾಂಟಿಟಿ ಇಡ್ಲಿ ಇದ್ದರೆ ಇಷ್ಟು ರೇಟು ಎಂದು ಫಿಕ್ಸ್ ಮಾಡಬಹುದು. ಪಂಚತಾರಾ ಹೋಟೆಲ್, ಹಾಲಿಡೇಇನ್, ಫೈವ್ ಸ್ಟಾರ್, ತ್ರೀ ಸ್ಟಾರ್, ಹೋಟೆಲ್‌ಗಳಲ್ಲಿ ಹೋಗುವುದಿಲ್ಲ. ಸಾಮಾನ್ಯವಾಗಿ ಜನಗಳು ಹೋಗತಕ್ಕಂತಹ ಹೋಟೆಲ್‌ಗಳಲ್ಲಿ ಸ್ವೀಟ್ ಸ್ವಲ್ಪ ಜಾಸ್ತಿಯಾಗಲಿ, ನಾವು ಅದರ ಬಗ್ಗೆ ತಕರಾರು ಮಾಡುವುದಿಲ್ಲ. ನಾನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಮಂತ್ರಿಯಾಗಿದ್ದಾಗ, ಏನು ಮಾಡಿದ್ದೆ ಅಂದರೆ ಬಸ್‌ಸ್ಟಾಂಡ್‌ನಲ್ಲಿರುವ ಕೆ.ಎಸ್.ಆರ್.ಟಿ.ಸಿ ಹೋಟೆಲ್‌ಗಳಲ್ಲಿ ಒಳ್ಳೆಯ ವ್ಯಾಪಾರವಾಗುತ್ತದೆ. ಕಾಫಿ, ಟೀ, ಉಪ್ಪಿಟ್ಟು, ಇಡ್ಲಿ ವಡೆ ಈ ನಾಲ್ಕನ್ನು ಎಲ್ಲ ಜನಸಾಮಾನ್ಯರು ತಿನ್ನತಕ್ಕದ್ದು ಕುಡಿಯತಕ್ಕದ್ದಾಗಿದೆ.

11.30 ಎ.ಎಂ

ಈ ತಿಂಡಿಗಳನ್ನು ಇಷ್ಟು ರೇಟ್ ಮೇಲೆ ನೀವು ಮಾರಲೇಬಾರದೆಂದು ಒಂದು ನಿಷೇಧವನ್ನು ಹಾಕಿದ್ದೆವು. ಇಲ್ಲದಿದ್ದರೆ ನಿಮ್ಮ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇವೆನ್ನುವ ಒಂದು ಆರ್ಡರನ್ನು ಮಾಡಿದ್ದೆವು. ತಮಗೆ ಗೊತ್ತಿರಬಹುದು, ಇದರಿಂದ ಕಡೆಯ ಪಕ್ಷ ಅವರು 4-5 ಐಟಮ್ ಗಳನ್ನು ಅದೇ ರೇಟ್‌ನಲ್ಲಿ ಮಾರುತ್ತಿದ್ದರು. ಅದೇ ರೀತಿ ಎಲ್ಲಾ ಹೋಟೆಲ್‌ಗಳಲ್ಲಿ ಏಕೆ ಮಾಡಬಾರದು? ನಿಮ್ಮ ಇನ್ಸ್‌ಪೆಕ್ಟರುಗಳು ಹೋಗಿ ಎಷ್ಟು ರೇಡ್‌ಗಳನ್ನು ಮಾಡಿದ್ದಾರೆ? ಜಿಲ್ಲಾ ಮಟ್ಟದ ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಕಂಟ್ರೋಲ್ ಇಟ್ಟುಕೊಂಡಿದ್ದಾರೆಯೇ? ಇದನ್ನು ವಿಚಾರ ಮಾಡಿ. ಮಂತ್ರಿಗಳು ತಮ್ಮ ಅಧಿಕಾರಿಗಳನ್ನು ಕರೆಸಿ ಬೆಲೆ ನಿಯಂತ್ರಣ ಮಾಡಲು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಿಳಿಸಿದ್ದಾರೆಯೇ? ಇದರ ಬಗ್ಗೆ ಒಂದು ಹೇಳಿಕೆಯನ್ನೂ ಸರ್ಕಾರದ ಪರವಾಗಿ ಇರುವಂಥ ವಕ್ತಾರರು ಕೊಟ್ಟಿಲ್ಲ.

ಇವತ್ತು ಹೋಟೆಲ್ ತಿಂಡಿ ತಿನಿಸುಗಳು ಬೆಲೆ ಜಾಸ್ತಿಯಾಗಿದೆ. ಎಣ್ಣೆ ಬೆಲೆ ಜಾಸ್ತಿಯಾಗಿದೆ, ಅಕ್ಕಿ ಬೆಲೆ ಜಾಸ್ತಿಯಾಗಿದೆ, ರಾಗಿ ಬೆಲೆ ಜಾಸ್ತಿಯಾಗಿದೆ, ಒಂದು ಕಡೆ ರೈತರು ಸರಿಯಾದ ಬೆಲೆ ಸಿಕ್ಕಲಿಲ್ಲವೆಂದು ಗೋಳಿಡುತ್ತಿದ್ದಾರೆ, ಇನ್ನೊಂದು ಕಡೆ ಸಾಮಾನ್ಯ ಜನರು ಬೆಲೆಗಳು ಜಾಸ್ತಿಯಾಗಿವೆ ಎಂದು ಶಾಪ ಹಾಕುತ್ತಿದ್ದಾರೆ. ಹಾಗಾದರೆ ಏನಾಗುತ್ತಿದೆ? ಮಧ್ಯಸ್ಥರು ತಿನ್ನುತ್ತಿದ್ದಾರೆ. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಇವರುಗಳ ಗೋಡೌನ್‌ಗಳ ಮೇಲೆ ಎಷ್ಟು ರೈಡ್ ಮಾಡಿದ್ದೀರಿ? ಇದನ್ನು ನೀವು ಮಾಡದೇ ಇದ್ದರೆ ಸಾಮಾನ್ಯ ಜನರೇ ಮಾಡುತ್ತಾರೆ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ಕೊನೆಯದಾಗಿ ಮತ್ತೊಂದು ವಿಚಾರವನ್ನು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಹಳ್ಳಿಗಳಲ್ಲಿ 1000-1500ಕ್ಕಿಂತ ಹೆಚ್ಚು ಜನರು ಇರುವಂಥ ಹಳ್ಳಿಗಳಲ್ಲಿ ಮಿನಿ ವಾಟರ್ ಸಪ್ಲೈ, ಎಆರ್‌ಡಬ್ಲ್ಯೂಎಸ್ ಎಂದು ನಾವು ಮಾಡಿಸಿದ್ದೇವೆ. ಒಂದು ಮಿನಿ ವಾಟರ್ ಸಪ್ಲೈಗೆ ಒಂದು ತಿಂಗಳಿಗೆ ಒಂದು ಮಂಡಲ್ ಪಂಚಾಯತ್‌ರವರು ಎಲೆಕ್ಟ್ರಿಸಿಟಿ ಬಿಲ್ ಒಂದು ಸಾವಿರ ರೂ.ಗಳನ್ನು ಕಟ್ಟಬೇಕು. ವರ್ಷಕ್ಕೆ 12000 ರೂ.ಗಳನ್ನು ಕಟ್ಟಬೇಕು. ಇವತ್ತು ಮಂಡಲ್ ಪಂಚಾಯತ್ ಇರಬಹುದು. ನಾಳೆ ನಿಮ್ಮ ಹೊಸ ಕಾನೂನು ಬಂದು ಅದನ್ನು ರದ್ದು ಮಾಡಿದರೆ, ಯಾವುದೋ ಒಂದು ಪಂಚಾಯತ್ ಬರುತ್ತದೆ.

ಒಂದು ಮಿನಿ ವಾಟರ್ ಸಪ್ಲೈಗೆ ವರ್ಷಕ್ಕೆ 12000 ರೂ.ಗಳನ್ನು ಕಟ್ಟಬೇಕಾದರೆ, ಒಂದು ಮಂಡಲ್ ಪಂಚಾಯತ್‌ನಲ್ಲಿ ಅಂಥ 10 ಹಳ್ಳಿಗಳು ಬಂದರೆ ಆ ಮಂಡಲ್ ಪಂಚಾಯತ್‌ನವರು ಸುಮಾರು ವರ್ಷಕ್ಕೆ ಒಂದೂವರೆ ಲಕ್ಷ ರೂ.ಗಳನ್ನು ಕಟ್ಟಬೇಕಾಗುತ್ತದೆ. ಹೇಗೆ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ? ಇನ್ನೂ ಕೆ.ಇ.ಬಿ.ಯವರು ಡಿಸ್‌ಕನೆಕ್ಟ್ ಮಾಡಿಲ್ಲ, ಬಹುಶಃ ಅಧಿವೇಶನ ನಡೆಯುತ್ತಿದೆ, ನಂತರ ಚುನಾವಣೆ ಬರುತ್ತದೆ ಎಂಬ ಕಾರಣದಿಂದ ಇರಬಹುದು. ಆದರೆ ನೋಟೀಸ್ ಕೊಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವಂಥ ಮಿನಿ ವಾಟರ್ ಸಪ್ಲೈ ಎಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳಿಗೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಕನ್‌ಸೆಷನ್ ರೇಟಿನಲ್ಲಿ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ರೈತರ ಐಪಿ ಸೆಟ್ಟುಗಳಿಗೆ ಯಾವ ರೀತಿ ಸ್ವಲ್ಪ ಕನ್‌ಸೆಷನ್ ಕೊಟ್ಟಿದ್ದೀರಿ ಅದೇ ರೀತಿ ಮಿನಿ ವಾಟರ್ ಸಪ್ಲೈ ಸ್ಕೀಮ್, ಎಆರ್‌ಡಬ್ಲ್ಯೂಎಸ್ ಎನ್‌ಆರ್‌ಡಬ್ಲ್ಯೂಎಸ್ ಸ್ಕೀಮ್‌ಗಳಿಗೂ ಎಲೆಕ್ಟ್ರಿಸಿಟಿ ಛಾರ್ಜಸನ್ನು ಕನ್‌ಸೆಷನ್ ರೇಟ್‌ನಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಸರ್ಕಾರದ ಬಗ್ಗೆ ಟೀಕೆ ಮಾಡಿದ್ದೀರಿ, ಬರೀ ವ್ಯವಹಾರದ ಬಗ್ಗೆ ಮಾತನಾಡಿದ್ದೀರಿ, ನೀವು ಸರ್ಕಾರದಲ್ಲಿದ್ದವರು ರಚನಾತ್ಮಕವಾದ ಸಲಹೆಗಳನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಸಲಹೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಮನಸ್ಸು ಮಾಡುವುದಿಲ್ಲ. ಈಗ ಮೈನ್ಸ್ ಅಂಡ್ ಜ್ಯುಯಾಲಜಿ ಮಿನಿಸ್ಟರ್‌ರವರು ಇಲ್ಲಿ ಇಲ್ಲ ಅವರು ಏನು ಹೇಳಿದ್ದಾರೆ, ಎಂದರೆ ಅಡಿಷನಲ್ ರಿಸೋರ್ಸ್ 10 ಕೋಟಿ ರೂಪಾಯಿಗಳು ಬರುವಂತೆ ಮಾಡಿದ್ದೆವು. ಆದರೆ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ, ಅದನ್ನು ವೆಕೇಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇವತ್ತಿನ ದಿವಸ ನಿಮ್ಮ ಅಧಿಕಾರದಲ್ಲಿ 25 ವರ್ಷವಾದರೂ ಇದನ್ನು ವೆಕೇಟ್ ಮಾಡಿಸಲಿಕ್ಕೆ ಆಗುವುದಿಲ್ಲ. ಈ ಮೈನ್ಸ್ ಅಂಡ್ ಜ್ಯುಯಾಲಜಿಯಲ್ಲಿ ಬಹಳ ಮುಖ್ಯವಾದಂಥ ಗ್ರಾನೈಟ್ ಕಲ್ಲುಗಳನ್ನು ರಾಷ್ಟ್ರೀಕರಣ ಮಾಡಿದರೆ, ಕೊನೆಯ ಪಕ್ಷ ಕರ್ನಾಟಕದಲ್ಲಿ ಮುಂದಿನ 50 ವರ್ಷಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಪ್ರತಿ ವರ್ಷವೂ 100 ಕೋಟಿ ರೂ.ಗಳ ಆದಾಯ ಬರುತ್ತದೆ.

ಹಿಂದೆ ಈ ಸದನದಲ್ಲಿ ಇದರ ಬಗ್ಗೆ ಒಂದು ರೆಸಲ್ಯೂಷನ್ ತಂದಿದ್ದೆವು. ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲರವರು ನಿಮ್ಮನ್ನು ಹಾಗೂ ವಾಟಾಳ್ ನಾಗರಾಜ್‌ರವರನ್ನೂ ಕರೆಯಿಸಿ ಮಾತನಾಡುತ್ತೇವೆಂದು ಹೇಳಿದ್ದರು. ಕರೆಯಲೂ ಇಲ್ಲ ಮಾತನಾಡಲೂ ಇಲ್ಲ. ಖಾಸಗಿಯವರಿಗೆ ಕೊಡುವಂಥದ್ದು ನಡೆದೇ ಇದೆ. ಸಲಹೆಗಳನ್ನು ಕೊಡಿ ಎಂದು ಹೇಳುತ್ತಾರೆ ಯಾರಿಗೆ ಕೊಡಬೇಕು? ಉಪಯೋಗವಾದರೂ ಏನು? ಇವತ್ತು ರಾಷ್ಟ್ರೀಕರಣ ಮಾಡಿದ್ದಲ್ಲಿ, ಸರ್ಕಾರದ ಆದಾಯವನ್ನು ಗ್ರಾನೈಟ್ ಖನಿಜ ಸಂಪತ್ತಿನಿಂದ 100 ಕೋಟಿ ರೂ.ಗಳಷ್ಟು ಹೆಚ್ಚು ಮಾಡಿಕೊಳ್ಳಬಹುದಾಗಿದೆ. ಬಹಳ ಕಳವಳದ ವಿಚಾರ ಬಹಳ ನೋವನ್ನು ಉಂಟುಮಾಡುವಂಥ ವಿಚಾರವೆಂದರೆ, ನೀವು ಏನು ಚುನಾವಣೆ ಘೋಷಣೆಯನ್ನು ಕೊಟ್ಟು ರಾಜ್ಯದ ಜನತೆಗೆ ಮಾತನ್ನು ಕೊಟ್ಟು, ನಾವು ಬಡವರ ಪರವಾಗಿ ಇರುತ್ತೇವೆ, ಹಿಂದುಳಿದ ವರ್ಗಗಳ ಪರವಾಗಿ ಇರುತ್ತೇವೆ. ಸಾಮಾನ್ಯ ಜನರ ಪರವಾಗಿ ಇರುತ್ತೇವೆ ಎನ್ನುವ ಮಾತನ್ನು ಕೊಟ್ಟಿದ್ದರು. ಆ ರೀತಿ ನಡೆದುಕೊಂಡಿಲ್ಲ. ಇದನ್ನು ನಾಲ್ಕೈದು ಜನ ಅಧಿಕಾರಿಗಳು ಕುಳಿತುಕೊಂಡು ಬರೆದಿದ್ದಾರೆ. ಬಹಳ ಒಳ್ಳೆಯ ಭಾಷೆಯಲ್ಲಿ ಇಂಗ್ಲೀಷ್‌ನಲ್ಲಿ ಮತ್ತು ಕನ್ನಡದಲ್ಲಿ ಬರೆದು ಒಂದು ಕೆಲಸ ಮಾಡಿದ್ದಾರೆ. ಅಧಿಕಾರಿಗಳು ಬಹಳ ಬುದ್ಧಿವಂತರು. ಏಕೆಂದು ಹೇಳಿದರೆ, ನಾಳೆ ಅವರ ಸರ್ಕಾರ ಹೋಗಿ ಮತ್ತೆ ನಮ್ಮ ಸರ್ಕಾರ ಬಂದರೂ ನಾವು ಆ ಸಂದರ್ಭದಲ್ಲಿ ಇದನ್ನು

ಕೇಳುತ್ತೇವೆ. ಈ ರೀತಿ ಅವರು ಬರೆಯಿಸಿದ್ದಾರಲ್ಲ ಎಂದು ಕೇಳಿದರೆ, ನಾವು ಮಾಡಿಸುತ್ತೇವೆಂದು ಹೇಳಿದ್ದೇವೆ ಹೊರತು ಮಾಡುತ್ತೇವೆ ಎಂದು ಹೇಳಿರಲಿಲ್ಲ ಸ್ವಾಮಿ ಎಂದು ಹೇಳಿದ್ದಾರೆ. ಯಾವುದೇ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಎಲ್ಲಾ ಮುಂದಿನ ವರ್ಷವೇ.

ಈ ವರ್ಷ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ನೀವು ಯಾವ ರೀತಿ ಚುನಾವಣೆಯನ್ನು ಎದುರಿಸುತ್ತೀರೋ ನನಗೆ ಅರ್ಥವಾಗುವುದಿಲ್ಲ. ದಯವಿಟ್ಟು ಉಳಿದಿರುವ ಕಾರ್ಯಕ್ರಮಗಳ ಕಡೆ ಮಾನ್ಯ ಮುಖ್ಯ ಮಂತ್ರಿಗಳು ಗಮನ ಕೊಟ್ಟು ನೋಡಿ, ಈ ಒಂದು ಬಜೆಟ್ ಕಾರ್ಮಿಕ ವಿರೋಧಿ ನೀತಿ, ಬಡವರ ವಿರೋಧಿ ನೀತಿಯಾಗಿರುವುದು ನಿಜ. ಅದನ್ನು ಬದಲಾವಣೆ ಮಾಡಬೇಕೆಂದು ಸರ್ಕಾರವನ್ನು ನಡೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮತ್ತೊಮ್ಮೆ ನಾನು ಬಹಳ ಮುಖ್ಯವಾಗಿ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥಾದ್ದು ಏನೆಂದರೆ, ಕನಿಷ್ಠ ವೇತನವನ್ನು ಕಾರ್ಮಿಕರಿಗೆ ನಿಗಧಿ ಮಾಡಲಿಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುವುದು, ಮತ್ತು ಹೋಟೆಲ್‌ಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಗಳನ್ನು ದಿನೇ ದಿನೇ ಜಾಸ್ತಿ ಮಾಡುತ್ತಿದ್ದಾರೆ. ಇದನ್ನು ಕಡಿಮೆ ಮಾಡಬೇಕು ಅಲ್ಲದೆ, ಶ್ರೀ ಸಾಮಾನ್ಯರು ಉಪಯೋಗಿಸುತ್ತಿರುವ ದಿನಬಳಕೆಯ ವಸ್ತುಗಳ ಬೆಲೆಗಳ ಮೇಲೆ ನಿಯಂತ್ರಣ ತರಲಿಕ್ಕೆ ಸರ್ಕಾರ ತುರ್ತಾಗಿ ಕ್ರಮ . ತೆಗೆದುಕೊಳ್ಳಬೇಕು. ಇನ್ನೊಂದು ಖಾಸಗೀಕರಣದ ಬಗ್ಗೆ.

ಪ್ರತಿಯೊಂದು ಕೆಲಸ ಎಂದು ಹೇಳಿದರೆ ಸರ್ಕಾರ ಅದನ್ನು ಖಾಸಗಿಯವರಿಗೆ ಕೊಡತಕ್ಕಂಥಾದ್ದು. ಈ ಖಾಸಗೀಕರಣವನ್ನು ಆದಷ್ಟು ಬೇಗನೆ ತಾವು ನಿಲ್ಲಿಸಬೇಕೆಂದು ಹೇಳುತ್ತಿದ್ದೇನೆ. ಕೆಲವು ಅನಿವಾರ್ಯ ಪ್ರಸಂಗಗಳು ಬಂದಾಗ, ಒಂದು ಸದನ ಸಮಿತಿ ರಚನೆ ಮಾಡಿ, ಎಲ್ಲಾ ಪಕ್ಷದವರು ಕುಳಿತುಕೊಂಡು ಸಮಾಲೋಚನೆ ಮಾಡಿ. ತಮ್ಮ ನಿರ್ಧಾರಕ್ಕೆ ನಾವೆಲ್ಲರೂ ಸಹಿತ ಬರೋಣ. ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ, ಸರ್ಕಾರಕ್ಕೆ ಬಹಳ ಲುಕ್ಸಾನಾಗುತ್ತದೆಂದು ಕಂಡು ಬಂದಾಗ ಅದನ್ನು ಜಂಟಿ ವಲಯಕ್ಕೆ ಕೊಡಬೇಕೇ ಅಥವಾ ಖಾಸಗೀ ವಲಯಕ್ಕೆ ಕೊಡಬೇಕೇ ಎಂಬುದರ ಬಗ್ಗೆ ವಿಚಾರ ಮಾಡೋಣ. ಆದರೆ ತಾವು ಒಂದೇ ದೃಷ್ಟಿ ಇಟ್ಟುಕೊಂಡು ಇದನ್ನು ಖಾಸಗಿಯವರಿಗೆ ಕೊಡಲಿಕ್ಕೆ ಹೋರಟಿದ್ದೀರಿ. ಇದೊಂದು ಶಾರ್ಟ್ ಸೈಟೆಡ್ ಪ್ರೋಗ್ರಾಂ ಆಗುತ್ತದೆ. ಇದರಿಂದ ಉಪಯೋಗವಾಗುವುದಿಲ್ಲ. ಈ ಬಜೆಟನ್ನು ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ. ಇದನ್ನು ನಾನು ವಿರೋಧಿಸುತ್ತಾ ನನಗೆ ಮಾತನಾಡಲು ಸಾಕಷ್ಟು ಕಾಲಾವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಶ್ರೀ ಬಂಗಾರಪ್ಪನವರು ಮಂಡಿಸಿರತಕ್ಕಂಥ ಈ ಬಜೆಟ್‌ನ್ನು ಬೆಂಬಲಿಸಿ, ಇದು ಬಡವರ ಪರವಾಗಿರತಕ್ಕಂಥ ಆಯವ್ಯಯ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಕರ್ನಾಟಕ ಸಾಬೂನು ಕಾರ್ಖಾನೆ ವಿಚಾರವಾಗಿ ನಾಲ್ಕು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಸಾಬೂನು ಕಾರ್ಖಾನೆ ಈಗ 59 ಕೋಟಿ ರೂ.ಗಳ ಲಾಸ್‌ನಲ್ಲಿದೆ. ಕಳೆದ 1982ನೇ ಸಾಲಿನಿಂದ ಕರ್ನಾಟಕ ಸಾಬೂನು ಕಾರ್ಖಾನೆ ನಿಗಮದವರು ಕಾರ್ಖಾನೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದರು. ಅದಕ್ಕಿಂತ ಮುಂಚೆ ಆ ಕಾರ್ಖಾನೆ ಬಹಳ ಲಾಭದಲ್ಲಿತ್ತು. ಈ ಒಂದು ವಿಸ್ತರಣೆ ಮಾಡಿದ ನಂತರ ಆ ಕಾರ್ಖಾನೆ ಸುಮಾರು 59 ಕೋಟಿ ರೂ.ಗಳನ್ನು ಕೇವಲ 9 ವರ್ಷಗಳಲ್ಲಿ ಗಳಿಸಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಕಾರಣಕರ್ತರು ಯಾರು? ಯಾವ ಅಲ್ಪ ಕಾಲದಲ್ಲಿ ಇದು ಎಡವಿದೆ? ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳತಕ್ಕಂಥ ನಿಟ್ಟಿನಲ್ಲಿ ಪ್ರಯತ್ನ

ಪಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಲ್ಲದೆ, ಇದಕ್ಕಾಗಿ ರೂ.9 ಕೋಟಿಗಳ ಒಂದು ರಿಹ್ಯಾಬಿಲಿಟೇಶನ್ ಪ್ರಾಜೆಕ್ಟನ್ನು ತಯಾರಿಸಿದ್ದಾರೆ. ಯಾವುದೇ ಒಂದು ಕೈಗಾರಿಕೆ, ಅದು ಸಂಪೂರ್ಣವಾಗಿ ಹೆಚ್ಚು ನಷ್ಟದಲ್ಲಿ ಹೋಗುತ್ತಿದ್ದರೆ, ಆ ಒಂದು ಕೈಗಾರಿಕೆಯನ್ನು ರಿಹ್ಯಾಬಿಲಿಟೇಶನ್ ಮಾಡಬೇಕಾದರೆ ಪುನರ್ಜೀವನ ಎಂದು ಏನು ಹೇಳುತ್ತೇವೆ ಅದು ಆದಾಗ ಅಂತಿಮವಾಗಿ ಆ ಕೈಗಾರಿಕೆಗೆ ಲಾಸ್ ಬರಬಾರದು ಎಲ್ಲವನ್ನೂ ಸಹಿತ ಮಾಡಿ ಕೊಡಿಸತಕ್ಕಂಥಾದ್ದನ್ನು ನೋಡಿದ್ದೇವೆ.

ಆದರೆ, ಈ ಒಂದು ಸೋಪ್ ಫ್ಯಾಕ್ಟರಿಗಾಗಿ ರೂ.9 ಕೋಟಿಯ ರಿಹ್ಯಾಬಿಲಿಟೇಶನ್ ಪ್ರಾಜೆಕ್ಟ್ ಮಾಡಿದ್ದಾರೆ. ನಾನೂ ಸಹ ಪಬ್ಲಿಕ್ ಅಂಡರ್ ಸೆಕ್ಟರ್ ಕಮಿಟಿಯಲ್ಲಿ ಇದ್ದು ನೋಡಿದ್ದೇನೆ. 9 ಕೋಟಿ ರೂ.ವನ್ನು ಕೊಟ್ಟರೂ ಈ ಒಂದು ಕೈಗಾರಿಕೆ ಉಳಿಯತಕ್ಕಂಥ ಮಟ್ಟದಲ್ಲಿಲ್ಲ 9 ಕೋಟಿ ರೂ. ಯಾವುದೇ ತರಹವಾದ ನಷ್ಟವನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಕೈಗಾರಿಕೆಯಲ್ಲಿ ಇಲ್ಲ. ಆದರೂ ಸಹಿತ ಸರ್ಕಾರ ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು. 9ಕೋಟಿ ರೂ.ಗಳನ್ನು ರಿಹ್ಯಾಬಿಲಿಟೇಶನ್‌ಗಾಗಿ ಸರ್ಕಾರ ಒಪ್ಪಿಗೆ ಕೊಡಬೇಕು, ಇನ್ನೂ ಕೊಟ್ಟಿಲ್ಲ. ಇವೆರಡರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ವಿಸ್ತರಣಾ ಕಾರ್ಯವನ್ನು ಬಾಂಬೆ ಕಂಪೆನಿಗೆ 'ಟರ್ನ್ ಕೀ' ಆಧಾರದ ಮೇಲೆ ಕೊಟ್ಟಿದ್ದು, ಸರಿಯಾಗಿ ಕೆಲಸ ಮಾಡಿ ಕೊಟ್ಟಿಲ್ಲ. ಆದುದರಿಂದ, ಅವರಿಗೆ ಈ ಎಲ್ಲಾ ಹಣವನ್ನು ಕೊಟ್ಟು, ಸರಿಯಾಗಿ ಕೆಲಸ ಮಾಡಿಕೊಡುವಂತೆ ತುರ್ತಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಕಿಂಕೋ, ಇದು ಒಂದು ಬಸ್ ಬಾಡಿ ಕಟ್ಟತಕ್ಕಂಥ ಸಂಸ್ಥೆ. ಸನ್ಮಾನ್ಯ ಸಾರಿಗೆ ಸಚಿವರು ಬೆಳಿಗ್ಗೆ ಮಾತನಾಡಿ ಬಹಳಷ್ಟು ಆರ್ಡರ್‌ಗಳು ಹಾಗೆಯೇ ಉಳಿದಿದೆಯೆಂದು ಉತ್ತರ ಕೊಟ್ಟಿದ್ದಾರೆ, ಯಾವುದಾದರೊಂದು ಬಸ್ ಬಾಡಿ ಕಟ್ಟತಕ್ಕಂಥ ಕಾರ್ಖಾನೆ ಬಹಳ ಚೆನ್ನಾಗಿ ಲಾಭವಾಗಿ ನಡೆಯುತ್ತಿರತಕ್ಕಂಥಾದ್ದನ್ನು ನಾವು ಕಣ್ಣಿನಿಂದ ನೋಡಿದ್ದೇವೆ. ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಸ್ ಬಾಡಿ ಕಟ್ಟತಕ್ಕಂಥ ಕಾರ್ಖಾನೆಗಳು ಸರಿಯಾಗಿಲ್ಲವೆಂದು ಅದನ್ನು ಹೈದರಾಬಾದಿಗೆ ಹೋಗಿ ಬಸ್ ಬಾಡಿಯನ್ನು ಕಟ್ಟಿಕೊಂಡು ಬರುವುದನ್ನು ನೋಡಿದ್ದೇವೆ. ಇವೊತ್ತು ಕಿಂಕೋ ಸರ್ಕಾರದ ಉದ್ದಿಮೆಯಾಗಿ ಅದಕ್ಕೆ ಕೆಎಸ್‌ಆರ್‌ಟಿಸಿ ಸರಿಯಾಗಿ ವ್ಯವಸ್ಥಿತವಾಗಿ ಆರ್ಡರ್‌ಗಳನ್ನು ತಲುಪಿಸುತ್ತಿಲ್ಲ. ಈಗ ಕಿಂಕೋ ರೂ. 14 ಕೋಟಿಗಳ ನಷ್ಟದಲ್ಲಿದೆ. ಇದನ್ನು ಸಹಾ ಬಹಳ ವ್ಯವಸ್ಥಿತವಾಗಿ ಖಾಸಗೀಕರಣ ಮಾಡತಕ್ಕಂಥ ಒಂದು ಸಂಚು ಅಲ್ಲಿ ನಡೆಯುತ್ತಿದೆ.

ಅದನ್ನು ದಯಮಾಡಿ ತಪ್ಪಿಸಬೇಕು. ಕಿಂಕೋ ಕಾರ್ಖಾನೆಯನ್ನು ಮತ್ತು ಕೆ.ಎಸ್.ಆರ್.ಟಿ.ಸಿ.ಯನ್ನು ಮರ್ಜ್‌ಮಾಡಿ ಬಾಡಿಯನ್ನು ಕಿಂಕೋದಲ್ಲಿ ಕಟ್ಟಿಸಿದರೆ ಬಹುಶಃ ಈ ಕಾರ್ಖಾನೆ ಉಳಿಯುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕಿಂಕೋ ಬಾಡಿಯನ್ನು ಕಟ್ಟತಕ್ಕಂತಹ ಸಂಸ್ಥೆಯಾಗಿ ಬೇರೆ ಮೇನೇಜ್‌ಮೆಂಟ್ ಇದಕ್ಕೆ ಕೆ.ಎಸ್.ಆರ್.ಟಿ.ಸಿ.ಗೆ ಬೇರೆ ಮೇನೇಜ್‌ಮೆಂಟ್ ಈ ರೀತಿಯಾಗಿ ಡೂಪ್ಲಿಕೇಟ್ ಮೇನೇಜ್‌ಮೆಂಟ್ ಇರತಕ್ಕದ್ದನ್ನು ತಪ್ಪಿಸಬೇಕಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮೈಸೂರು ಎಲೆಕ್ಟ್ರಿಕಲ್ ಕಂಪೆನಿ. ಇದು ವಿಶ್ವೇಶ್ವರಯ್ಯನವರು ಮಾಡಿದಂತ ಒಂದು ಕಂಪೆನಿ. ಅದರಲ್ಲಿಯು ಸಹ 12 ಕೋಟಿ ಲಾಸ್ ಆಗಿದೆ. ಈ ಕಂಪೆನಿಯಲ್ಲಿರುವ ಎಲ್ಲಾ ರೀತಿ ನೀತಿಗಳು ಹೆಚ್ಚು ಕಡಿಮೆ ಎನ್.ಜಿ.ಎಫ್. ಕಂಪೆನಿಯಲ್ಲಿ ಇದ್ದ ಹಾಗೆ ಇದೆ. ಈವತ್ತು ಎಂ.ಎ.ಬಿ.ಇ., ಕ.ವಿ.ಕಾ ಮತ್ತು ಎನ್.ಜಿ.ಎಫ್. ಈ ಮೂರು ಕಂಪೆನಿಗಳಲ್ಲಿ ಮಾಡತಕ್ಕಂತಹ ಎಲ್ಲಾ ಒಟ್ಟಾರೆ ವಹಿವಾಟುಗಳು ಒಂದೇ

ರೀತಿಯಾಗಿದೆ, ಉತ್ಪಾದನೆಯು ಒಂದೇ ತರಹ ಈ ಮೂರು ಮ್ಯಾನೇಜ್‌ಮೆಂಟ್‌ಗಳು ಇದಕೋಸ್ಕರವಾಗಿದೆ. ಸಾರ್ವಜನಿಕ ಸಂಸ್ಥೆಯಲ್ಲಿ ತುಂಬಾ ಲಾಸ್ ಆದರೂ ಸಹ ಸಾರ್ವಜನಿಕ ಸಂಸ್ಥೆಗಳನ್ನು ನಡೆಸಲು ಸಾಧ್ಯವಿಲ್ಲದಿದ್ದರೂ ಕೂಡ ಒಂದು ಪರಿಣಿತರ ಸಮಿತಿಯನ್ನು ಮಾಡಿ ಇದನ್ನು ಪರಿಶೀಲನೆ ಮಾಡತಕ್ಕಂತಹ ಮಟ್ಟಕ್ಕೆ ಮುಖ್ಯ ಮಂತ್ರಿಗಳು ಹೋಗಿರತಕ್ಕಂತಹ ಈ ಸಂದರ್ಭದಲ್ಲಿ ಅಧ್ಯಕ್ಷರೇ ಈ ಮೂರು ಮ್ಯಾನೇಜ್‌ಮೆಂಟ್‌ಗಳ ಅಗತ್ಯವಿದೆಯೇ ಎಂಬ ಬಗ್ಗೆ ಸರ್ಕಾರ ತ್ವರಿತವಾಗಿ ಪರಿಶೀಲನೆ ಮಾಡಲು ಕಳಕಳಿಯಿಂದ ವಿನಂತಿಸುತ್ತೇನೆ. ಎಂ.ಎ.ಐ.ಇ. ತಯಾರು ಮಾಡತಕ್ಕಂತಹ ಯಾವುದೇ ವಸ್ತುವಿರಲಿ ಅದೇ ರೀತಿ ಇನ್‌ಫ್ರಾಸ್ಟಕ್ಚರ್ ಮಾಡತಕ್ಕಂತಹ ವ್ಯವಸ್ಥೆ ಎನ್‌ಜಿಎಫ್‌ನಲ್ಲಿದೆ, ಕ.ವಿ.ಕಾ.ದಲ್ಲಿದೆ. ಎಲ್ಲಾ ತರದಲ್ಲಿಯೂ ಮೂರರಲ್ಲಿಯು ಒಂದೇ ರೀತಿಯಾಗಿ ಇರತಕ್ಕಂತಹ ಸಂದರ್ಭದಲ್ಲಿ ಈ ಮೂರನ್ನು ಒಂದು ಮಾಡಿ, ಒಂದೇ ಮ್ಯಾನೇಜ್‌ಮೆಂಟ್ ಮಾಡಿ ಮೂರನ್ನು ನಡೆಸತಕ್ಕಂತಹ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೈಸೂರು ಲ್ಯಾಂಪ್ಸ್ ಇಲ್ಲಿ ಹೆಚ್ಚು ಕಡಿಮೆ ಹೆಚ್ಚಿನ ನಷ್ಟವಿಲ್ಲದೆ ನಡೆಯುತ್ತಿದ್ದರೂ ಮುಂದಿನ ದಿನಗಳಲ್ಲಿ ಹೆಚ್ಚು ನಷ್ಟಾಗುವಂತಹ ಸೂಚನೆಗಳು ಆ ಕಂಪೆನಿಯಲ್ಲಿ ಜಾಸ್ತಿಯಾಗಿದೆ. ಅಲ್ಲಿ ಬಹಳಷ್ಟು ರೆಕ್ರುಟ್‌ಮೆಂಟ್‌ಗಳು ನಡೆಯುತ್ತಿದೆ, ಹಣವನ್ನು ತೆಗೆದುಕೊಂಡು ಕೆಲಸವನ್ನು ಕೊಟ್ಟಿದ್ದಾರೆ. ಯಾವ ಎಂ.ಎಲ್.ಎ. ಹೇಳಿದರು ಯಾವ ಮಂತ್ರಿ ಹೇಳಿದರೂ ಕೆಲಸ ಕೊಡುವುದಿಲ್ಲ ಅಲ್ಲಿರತಕ್ಕಂತಹ ಮ್ಯಾನೇಜಿಂಗ್ ಡೈರೆಕ್ಟರ್‌ರೊಬ್ಬರು ಕೆಲಸ ಕೊಡಲು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಸಂಪೂರ್ಣವಾಗಿ ತನಿಖೆ ಮಾಡಿ ಕಳೆದ 2-3 ವರ್ಷಗಳಲ್ಲಿ ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಎಷ್ಟು ಜನ ಕೆಲಸಕ್ಕೆ ಬೇಕಾಗಿದ್ದರು, ಕಾರ್ಖಾನೆಯಲ್ಲಿ ಎಷ್ಟು ಜನರ ಅಗತ್ಯವಿದೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಲ್ಲಿ ನೂರಕ್ಕೆ ನೂರೈವತ್ತು ಭಾಗ ಕೆಲಸಗಾರರು ಇದ್ದಾರೆ. ನೂರು ಜನ ಕೆಲಸಗಾರರು ಬೇಕಾಗಿರುವಂತಹ ಕಡೆ ನೂರೈವತ್ತು ಅಂದರೆ ಹೆಚ್ಚಾಗಿ ಕೆಲಸಗಾರರನ್ನು ತೆಗೆದುಕೊಂಡಿದ್ದು ಮುಂದಿನ ದಿನಗಳಲ್ಲಿ ನಷ್ಟಕ್ಕೆ ಕಾರಣರಾಗುವಂತಹ ವ್ಯವಸ್ಥೆಯಾಗಲು ದಾರಿಯಾಗುತ್ತಿದೆ. ನೇಮಕಾತಿಯಲ್ಲಿ ಭ್ರಷ್ಟಾಚಾರ ಏನು ನಡೆದಿದೆ ಇದನ್ನು ತನಿಖೆ ಮಾಡಿಸಬೇಕೆಂದು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ವಿಕ್ರಾಂತ್ ಟೈರ್ಸ್ ಇಲ್ಲಿ ಅಧ್ಯಕ್ಷರೇ 1990ನೇ ಇಸವಿಯಲ್ಲಿ ವಿಕ್ರಾಂತ್ ರೇಡಿಯಲ್ ಟೈರ್ಸ್ ಹೊರಗೆ ಬರಬೇಕಾಗಿತ್ತು. ಇತ್ತೀಚೆಗೆ ಅಲ್ಲಿಗೆ ಒಳ್ಳೆಯ ಮ್ಯಾನೇಜಿಂಗ್ ಡೈರೆಕ್ಟರ್ ಹೋಗಿದ್ದಾರೆ. ಎಂಬತಕ್ಕಂತಹ ವಿಚಾರವನ್ನು ಕೇಳಿದ್ದೇನೆ. 1990ನೇ ಇಸವಿಯಲ್ಲಿ ಈ ಟೈರು ಉತ್ಪಾದನೆಯಾಗಿ ಹೊರಗಡೆ ಬರಬೇಕಾಗಿತ್ತು. ಅಲ್ಲಿನ ಅಧಿಕಾರಿ ವರ್ಗದವರು ಸಿಯೆಟ್ ರೇಡಿಯಲ್ ಟೈರ್ಸ್‌ನ ಮಾಲೀಕರ ಜೊತೆಯಲ್ಲಿ ಶಾಮೀಲಾಗಿ ಇನ್ನೂ ಸಹ ಈ ಟೈರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದಿರುವಂತಹದನ್ನು ನೋಡಿದ್ದೇವೆ. ಮತ್ತು ಕೇಳಿದ್ದೇವೆ. ದಯಮಾಡಿ ನಾನು ಒಂದು ವಿನಂತಿಯನ್ನು ಮಾಡುತ್ತೇನೆ, ನ್ಯಾಷನಲ್ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಕಮಿಟಿಯವರು 1990ನೇ ಇಸವಿಯೊಳಗೆ ಇದನ್ನು ಮುಗಿಸಬೇಕೆಂದು, ರೇಡಿಯಲ್ ಟೈರ್ಸ್ ಕಂಪೆನಿಗೆ ಕೊಟ್ಟಿದ್ದಾರೋ? ಅದನ್ನು ಯಾವುದಕ್ಕಾಗಿ ಮುಗಿಸಿಲ್ಲಾ? ಎಂಬ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ವಿಕ್ರಾಂತ್ ಕಂಪೆನಿಯಲ್ಲಿ ಆಗತಕ್ಕಂತಹ ಟೈರ್‌ಗಳಿಗೆ ಬಹಳ ಚೆನ್ನಾಗಿ ಬೇಡಿಕೆ ಇದೆ ಅದು ಬಹಳ ಚೆನ್ನಾಗಿ ಹೋಗುತ್ತದೆ. ಆದರೆ ವಿಕ್ರಾಂತ್ ಕಂಪೆನಿಯಿಂದ ಹೊರಗೆ ಬರದಂತೆ ತಡೆದು ಕೊಂಡಿರತಕ್ಕಂತಹ ಸಂಚನ್ನು ಸಂಕ್ಷಿಪ್ತವಾಗಿ ತನಿಖೆ ಮಾಡಿಸಿ ಶೀಘ್ರವಾಗಿ ರೇಡಿಯಲ್ ಟೈರ್ಸ್ ಹೊರಗೆ ಬರಲು ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ಸಾರ್ವಜನಿಕ ಸೌಮ್ಯದ ಉದ್ದಿಮೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಎಷ್ಟು ಹುದ್ದೆಗಳು ಅವಶ್ಯಕವಾಗಿ ಬೇಕಾಗಿದೆ, ಹುದ್ದೆಗಳನ್ನು ತುಂಬುವಾಗ ಪ್ರತಿಯೊಂದು ಕಂಪೆನಿಗೂ ಕಾರ್ಪೊರೇಷನ್‌ಗೂ ಸಹಿತ ಪ್ರತ್ಯೇಕವಾದ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ಅಲ್ಲಿಯೂ ಸಹ 18 ಪರ್‌ಸೆಂಟ್ ಮೀಸಲಾತಿಯನ್ನು ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಜನರಿಗೆ ಉದ್ಯೋಗವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕು. ಆ ಏರಿಯಾದಲ್ಲಿ ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಕೈಗಾರಿಕೆಗಳಿದ್ದರೆ ಬೆಂಗಳೂರಿನಿಂದ ಅಲ್ಲಿಗೆ ಹೋಗಿ ಕೆಲಸಕ್ಕೆ ಸೇರಿಕೊಳ್ಳುವುದಿಲ್ಲ, ಆ ಭಾಗದ ಜನರಿಗೆ ಉದ್ಯೋಗ ಸಿಗುವಂತಹ ಒಂದು ಪ್ರತ್ಯೇಕವಾದ ನಿಯಮವನ್ನು ಮಾಡಬೇಕು, ಪ್ರತ್ಯೇಕವಾದ ರೆಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನೂ ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕ ಬೋರ್ಡ್‌ಗಳಲ್ಲಿ ಇರತಕ್ಕಂತಹ ಐ.ಎ.ಎಸ್. ಮಿತ್ರರನ್ನು ಕಡಿಮೆ ಮಾಡಿ ಖಾಸಗಿಯಾಗಿ ಮಿತ್ತರ್‌ಗಳನ್ನು ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಅವರನ್ನು ತೆಗೆದು ನಾನ್ ಅಫೀಷಿಯಲ್ ಹಾಕಬೇಕೆಂದು ಹೇಳುತ್ತೀರಾ?

ಶ್ರೀ ಎಲ್.ಆರ್ ಶಿವರಾಮೇಗೌಡ : ನಾನು ಅಫೀಷಿಯಲ್ಸ್ ಏಕೆ ಹಾಕಲಿ ಎಂದರೆ ಇದುವರೆಗೂ ನೀವು ಐ.ಎ.ಎಸ್.ನವರನ್ನು ಹಾಕಿದ್ದೀರಿ.

ಶ್ರೀ ಕೆ.ಹೆಚ್. ಪಾಟೀಲ್ : ನಿಮ್ಮ ಸಲಹೆ ಹೇಳುವಾಗ ಅವರನ್ನು ಕಡಿಮೆ ಮಾಡಿ ಅಂದರೆ ಅವರೂ ಇರಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರನ್ನು ಕಡಿಮೆ ಮಾಡಿ ನಮ್ಮ ಖಾಸಗಿ ಜನರನ್ನು ಹಾಕಿ. ಬಹಳ ದಿನದಿಂದ ಸಮಾಜದಲ್ಲಿ ಸೇವೆ ಮಾಡಿರತಕ್ಕಂಥ ಖಾಸಗಿ ಜನರನ್ನು ಹಾಕಿ. ಮೈಸೂರು ಮಿನರಲ್‌ನಲ್ಲಿ ಗ್ರಾನೈಟ್ ಲೂಟಿ, ಗ್ರಾನೈಟ್ ಲೂಟಿ ಎಂದು ಈ ಸದನದಲ್ಲಿ ಬಡಿದುಕೊಳ್ಳುತ್ತಿರತಕ್ಕದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಬೆಂಗಳೂರು ಮಂಗಳೂರು ಹೆದ್ದಾರಿಯಲ್ಲಿ ಒಂದು ದಿವಸಕ್ಕೆ 100-200 ಲಾರಿ ಗ್ರಾನೈಟ್ ಕಲ್ಲು ಹೊರದೇಶಕ್ಕೆ ಕಳುಹಿಸಲು ಮಂಗಳೂರು ಬಂದರಿನಲ್ಲಿ ಕಲ್ಲುಗಳು ಬಿದ್ದಿರತಕ್ಕದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಲೂಟಿ ಆಗುತ್ತಾ ಇದೆ, ಸರ್ಕಾರ ಎಷ್ಟೇ ವ್ಯವಸ್ಥಿತವಾಗಿ ಕ್ರಮವನ್ನು ತೆಗೆದುಕೊಂಡರೂ ಸಹ ಇದನ್ನು ತಪ್ಪಿಸುವುದಕ್ಕೆ ಆಗಿಲ್ಲ. ಗ್ರಾನೈಟ್ ಲೂಟಿ ತಪ್ಪಿಸಬೇಕಾದರೆ ಮೈಸೂರು ಮಿನರಲ್ಸ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಿ ಇವರಿಗೆ ವಹಿಸಿದರೆ ಇದು ಸುಲಭವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮೈಸೂರು ಮಿನರಲ್ಸ್ ಅಂಡ್ ಮಿನಿಸ್ಟ್ರೇಷನ್‌ನಲ್ಲಿ ಏನಾಗಿದೆ ಎಂದರೆ ಎರಡು ಗುಂಪುಗಳು ಆಗಿವೆ. ಒಂದು ಮ್ಯಾನೇಜ್‌ಮೆಂಟಿಗೆ ಪರವಾಗಿರತಕ್ಕಂಥ ಗುಂಪು, ಇನ್ನೊಂದು ಮ್ಯಾನೇಜ್‌ಮೆಂಟಿಗೆ ವಿರುದ್ಧವಾಗಿರತಕ್ಕ ಗುಂಪು. ಒಂದು ವಿಚಾರವನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೇನೆ. ಮೈಸೂರು ಮಿನರಲ್ಸ್‌ನಲ್ಲಿ ಕೆಲವು ಭ್ರಷ್ಟಾ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಟ್ಟು ಇನ್‌ಕ್ರಿಮೆಂಟ್ ಕೊಟ್ಟು ಅವರು ಮುಂದುವರಿಯುತ್ತಿರುವುದನ್ನು ನಾವು ಕಣ್ಣಿನಿಂದ ನೋಡಿದ್ದೇವೆ. ಆದರೆ ಕೆಲವು ಬಡಪಾಯಿ ಅಧಿಕಾರಿಗಳು ಯಾರು ಯಾರು ನ್ಯಾಯ ನೀತಿಯನ್ನು ಎತ್ತಿ ತೋರಿಸಿದರೆ ಅಂಥವರನ್ನು ಸಸ್ಪೆಂಡ್ ಮಾಡತಕ್ಕಂಥದ್ದನ್ನು ನಾವು ನೋಡಿದ್ದೇವೆ. ದಯವಿಟ್ಟು ಮೈಸೂರು ಮಿನರಲ್ಸ್ ಅಡ್‌ಮಿನಿಸ್ಟ್ರೇಷನ್‌ನಲ್ಲಿ ಪ್ರತ್ಯೇಕವಾದ ತನಿಖೆಯನ್ನು ಮಾಡಿಸಬೇಕೆಂದು

ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ. ಮೈಸೂರು ಮಿನರಲ್ಸಿನ ಅಡ್‌ಮಿನಿಸ್ಟ್ರೇಷನ್ ಇವತ್ತು ಡೆಡ್ ಆಗಿದೆ. ತಾವು ಇದನ್ನು ತಪ್ಪಿಸಲು ಆಲೋಚಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಕಾರ್ಖಾನೆಯನ್ನು ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರದ ಕಾಲದಲ್ಲಿ ಇದನ್ನು ಮಾರಾಟ ಮಾಡಬಾರದೆಂದು ಹೇಳಿದ್ದೆ. ಇನ್ನು ಸಹ ಈ ಸರ್ಕಾರದಿಂದ ಮೇಮೋರ್‍ಯಾಂಡಂ ಆಫ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ಸ್‌ಗೆ ಇನ್ನು ಸೈನ್ ಹಾಕಿಲ್ಲ. ಬೇರೆ ದೇಶದವರು ಇದನ್ನು ಮಾಡಿರುವುದು, ಇದೊಂದು ಹೆಮ್ಮೆಯ ಕಂಪೆನಿ ಅಧ್ಯಕ್ಷರೆ ಇದಕ್ಕೆ ಇನ್ನು ಸಹಿ ಹಾಕಿಲ್ಲ. ಆದ್ದರಿಂದ ಇದನ್ನು ವಾಪಸ್ಸು ಪಡೆದು ರಾಜ್ಯ ಸರ್ಕಾರ ಉಳಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಪಬ್ಲಿಕ್ ಅಂಡರ್ ಸೆಕ್ಟಾರ್ ಮ್ಯಾನೇಜ್‌ಮೆಂಟ್‌ನಲ್ಲಿ ಏನಾಗಿದೆ ಎಂದರೆ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ಸ್‌ರವರ ಪ್ರಕಾರ ಒಂದು ಕಾರ್ಪೊರೇಷನ್‌ನಲ್ಲಿ 10-9 ಜನ ಡೈರೆಕ್ಟರುಗಳಿರುತ್ತಾರೆ. ಪ್ರತಿ ಕಾರ್ಪೊರೇಷನ್‌ನಲ್ಲಿ ಪ್ರತಿ ಕಂಪೆನಿಯಲ್ಲಿ ಕೇವಲ ಈ 40-50 ಜನಗಳ ಜಾಗೀರ್ ಆಗುತ್ತದೆ. ಕೆ.ಎಸ್.ಎಫ್.ಸಿ.ಗೆ ಉದಾಹರಣೆಗಾಗಿ 8 ಜನ ಡೈರೆಕ್ಟರ್‌ಗಳನ್ನು ತೆಗೆದುಕೊಂಡರೆ ಅಲ್ಲಿ ಇರತಕ್ಕಂಥ 8 ಜನ ಡೈರೆಕ್ಟರುಗಳು ಬೇರೆ ಬೇರೆ 18 ಕಂಪೆನಿಗಳಲ್ಲಿ ಡೈರೆಕ್ಟರ್ ಆಗಿರುತ್ತಾರೆ. ಮೈಸೂರು ಲ್ಯಾಂಪ್ಸ್, ಮೈಸೂರು ಮಿನರಲ್ಸ್, ವಿಕ್ರಾಂತ್ ಮತ್ತು ಮೈಸೂರು ಪೇಪರ್ ಕಾರ್ಖಾನೆ ಈ ರೀತಿ ಡೈರೆಕ್ಟರ್ ಆಗಿರುತ್ತಾರೆ. ಸಾಬೂನು ಕಾರ್ಖಾನೆಯಲ್ಲಿಯೂ ಸಹ ಡೈರೆಕ್ಟರ್ ಆಗಿರುತ್ತಾರೆ. ಕೇವಲ ಈ 9-10 ಅಧಿಕಾರಿಗಳೇ ಎಲ್ಲಾ ಕಡೆ ಸುತ್ತಾಟ ಮಾಡಿ ಮುಗಿಸಿದ ಮೇಲೆ ಅಲ್ಲಿ ಇಲ್ಲಿ ಮುಗಿಸಿದ ಮೇಲೆ ಮತ್ತೊಂದು ಕಡೆ ಒಂದು ರೌಂಡ್ ಮುಗಿಸಿದರೆ ತಿರುಗಿ ಇನ್ನೊಂದು ರೌಂಡ್ ಹಾಕಿಕೊಂಡು ಹೀಗೆ ಬರುತ್ತಾರೆ. ತಾವು ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಲ್ಲ ಶಿವರಾಮೇಗೌಡರು ಅತ್ತ ಇತ್ತ ಹೋಗುತ್ತಾರೆ ಎಂದು ಹೇಳಿದಿರಿ. ಎಲ್ಲಿ ಹೆಚ್ಚಿಗೆ ಇರುತ್ತದೆಯೋ ಅಲ್ಲಿಗೆ ಮತ್ತೆ ಹೋಗುವುದು ಹೇಗೆ ನಡೆದಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಹೊಸದಾಗಿ ನಡೆದಿಲ್ಲ. 1984 ರಿಂದಲೂ ನಡೆದಿದೆ. ಈ ಐ.ಎ.ಎಸ್.ರಲ್ಲಿ ಒಳ್ಳೆಯ ಪರಿಣಿತರೂ ಉತ್ತಮರೂ ಇದ್ದಾರೆ. ಈಗ ಒಂದು ಉದಾಹರಣೆಗೆ ಯಾವುದಾದರೂ ಒಂದು ಕಾರ್ಖಾನೆಗೆ ಲಾಭ ಬರತಕ್ಕಂತದ್ದನ್ನು ಒಂದು ವ್ಯವಸ್ಥೆ ಮಾಡಿ ಅವರಿಗೆ ಜವಾಬ್ದಾರಿ ಫಿಕ್ಸ್ ಮಾಡಿ ಹೆಚ್ಚು ದಿವಸ ಅಲ್ಲೇ ಅವರನ್ನು ಉಳಿಸಿ ಅವರಿಗೆ ಜವಾಬ್ದಾರಿ ಕೊಡತಕ್ಕಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕು. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹ್ಯಾಂಡ್ ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಎಂ.ಡಿ. ಆಗಿರತಕ್ಕಂತಹವರು ಈ ರಾಜ್ಯ ಸರ್ಕಾರದ ಹಣದಿಂದ ಹೊರದೇಶವನ್ನೆಲ್ಲಾ ಸುತ್ತಾಡಿಕೊಂಡು ಬಂದರು. ಅದನ್ನು ನೋಡಿಕೊಂಡು ನಾನು ವ್ಯಾಪಾರವನ್ನು ಕುದುರಿಸುತ್ತೇನೆ ಎಂದು ಹೇಳಿಕೊಂಡು ಬಂದರು. ಐದು ಲಕ್ಷ ಸರ್ಕಾರದ ಹಣ ಖರ್ಚು ಮಾಡಿಕೊಂಡು ಬಂದರು. ಮತ್ತೆ ಅವರು ಅಲ್ಲಿಂದ ಟ್ರೈನಿಂಗ್ ಮುಗಿಸಿಕೊಂಡು ಬಂದ ತಕ್ಷಣ ಇಲ್ಲಿಂದ ಅವರನ್ನು ಟ್ರಾನ್ಸ್‌ಫರ್ ಮಾಡಲಾಗಿದೆ. ಅದರ ಔಚಿತ್ಯವನ್ನು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ. ದಯವಿಟ್ಟು ಯಾವ ಉದ್ದೇಶಕೋಸ್ಕರ ಹೊರದೇಶಕ್ಕೆ ಕಳುಹಿಸುತ್ತಾರೋ ಆ ಉದ್ದೇಶವನ್ನು ಸಫಲ ಮಾಡಿಕೊಂಡು ಬಂದ ಮೇಲೆ ಅವರನ್ನು ಅಲ್ಲಿಯೇ ಉಳಿಸತಕ್ಕಂಥ ವ್ಯವಸ್ಥೆಯಾಗಬೇಕು. ಉದಾಹರಣೆಗೆ ಕಾಯಿರ್ ಕಾರ್ಪೊರೇಷನ್ ಎನ್ನುವ ನಿಗಮ ಇದೆ. ಆ ಕಾಯಿರ್ ಕಾರ್ಪೊರೇಷನ್‌ಗೆ ಹೆಚ್ಚು ಪರಿಣಿತರು ಬೇಕು. ಈ ದೇಶದಲ್ಲಿ ಟ್ರಾನ್ಸ್‌ಫ್ಲೆಬರ್ ಸೆಕ್ಟಾರ್ ಮುಂದುವರಿಯಬೇಕು ಎನ್ನುವ ಕಳಕಳಿಯಿಂದ,

ಈ ರಾಜ್ಯದಲ್ಲಿ ಆ ಒಂದು ನಿಗಮವನ್ನು ಮಾಡಿದ ಮೇಲೆ ಅಲ್ಲಿ ಇದ್ದ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ಟ್ರಾನ್ಸಫರ್ ಆಗಿತ್ತು. ಅವರನ್ನು ಹೊರದೇಶಕ್ಕೆ ಪರಿಣಿತಿಯನ್ನು ಪಡೆಯಲು ಕಳುಹಿಸಲು ಅವರ ಆರ್ಡರನ್ನೂ ಪೆಂಡಿಂಗ್ ಇಟ್ಟು ಅವರು ಅಲ್ಲಿ ಅವರಿಗೆ ಸರ್ಕಾರದ ದುಡ್ಡಿನಲ್ಲಿ ಮೋಜು ಮಾಡಿಸಿ ಅದನ್ನೆಲ್ಲಾ ನೋಡಿಕೊಂಡು ಬಂದ 4 ದಿವಸಕ್ಕೆ ಅವರನ್ನು ಮತ್ತೆ ಅಲ್ಲಿಂದ ವರ್ಗ ಮಾಡಿಸಿದ್ದಾರೆ.

ಈ ಸರ್ಕಾರದ ನೀತಿಯನ್ನು ಬದಲಾವಣೆ ಮಾಡಬೇಕು, ಇದನ್ನು ಮಾಡದೇ ಹೋದರೆ ಪಬ್ಲಿಕ್ ಅಂಡರ್ ಟೇಕಿಂಗ್ ಸೆಕ್ಟಾರ್‌ನಲ್ಲಿ ಏನು ನಾಲ್ಕು ಸಾವಿರ ರೂಪಾಯಿ ಬಂಡವಾಳ ಹೂಡಿರತಕ್ಕಂಥ ಈ ರಾಜ್ಯ ಸರ್ಕಾರದ ಹಣ ಇದೆ, ಇದು ಸರ್ವ ನಾಶವಾಗುತ್ತದೆ. ಇವೊತ್ತು 900 ಕೋಟಿ ರೂಪಾಯಿ ಲಾಸ್ ಇದೆ. ಒಬ್ಬ ಹೆಣ್ಣು ಮಗಳು ರೇಣುಕಾ ರಾಜೇಂದ್ರನ್ ಅಂತಹವರು ಕೇವಲ 25 ಸಾವಿರ ರೂಪಾಯಿ ಚೆಕ್ ತೆಗೆದುಕೊಂಡರು, ಹಣ ತೆಗೆದುಕೊಳ್ಳಲಿಲ್ಲ, ಅದನ್ನು ರಾಜಕಾರಣಿಗಳು ವಿರೋಧ ಮಾಡಿದರು ಮತ್ತು ಈ ಸದನದಲ್ಲಿ ಅವರಿಂದ ರಾಜೀನಾಮೆ ತೆಗೆದುಕೊಂಡು ಆಚೆಗೆ ಕಳುಹಿಸಿದರು. ಈ ಒಂಬೈನೂರು ಕೋಟಿ ರೂಪಾಯಿಗಳನ್ನು ಯಾರು ತಿಂದರು? ಒಬ್ಬ ಅಧಿಕಾರಿಯನ್ನು ಏನಾದರೂ ಜೈಲಿಗೆ ಹಾಕಿರತಕ್ಕಂತಾದ್ದು ಇದ್ದರೆ ಹೇಳಿ. ಪಬ್ಲಿಕ್ ಅಂಡರ್ ಟೇಕಿಂಗ್ ಸೆಕ್ಟಾರ್‌ನಲ್ಲಿರತಕ್ಕಂಥ ಅಧಿಕಾರಿಗಳು 10 ಕೋಟಿ ರೂಪಾಯಿಗಿಂತಲೂ ಮೇಲೆ ತಿಂದರೆ ಅವರನ್ನು ಜೈಲಿಗೆ ಹಾಕತಕ್ಕಂಥ ಕಾನೂನು ಮಾಡಿ, 10 ಕೋಟಿ ರೂಪಾಯಿವರೆಗೆ ಬಿಟ್ಟು ಬಿಡಿ. ಯಾವ ಅಧಿಕಾರಿಗಳು 10 ಕೋಟಿ ರೂಪಾಯಿ ಒಳಗೆ ಇಲ್ಲ. ಈಗ ಯಾರೂ ಮಂತ್ರಿಗಳಾಗಬೇಕಾಗಿಲ್ಲ. ಒಂದು ಕಂಪೆನಿಯ, ನಿಗಮದ ಅಧ್ಯಕ್ಷರಾದರೆ ಸಾಕು ಚೆನ್ನಾಗಿ ತಿಂದು ತೇಗಿ ಆನಂದವಾಗಿ ಮನೆಯಲ್ಲಿ ನಾಲ್ಕು ನಾಲ್ಕು ಕಾರುಗಳನ್ನು ಇಟ್ಟುಕೊಂಡು ಇಂದಿರಾ ನಗರದಲ್ಲಿ ಫಸ್ಟ್ ಕ್ಲಾಸ್ ಗೆಸ್ಟ್ ಹೌಸ್ ಮನೆಗಳನ್ನು ಮಾಡಿಕೊಂಡು ಸೋಗು ಮಾಡತಕ್ಕಂಥಾದ್ದು ನಾವು ನೋಡಿದ್ದೇವೆ. ಇವೆಲ್ಲಾ ಪಬ್ಲಿಕ್ ಅಂಡರ್ ಸೆಕ್ಟಾರ್‌ನಲ್ಲಿ ಹಣ ತಿಂದವರೆ. ಸಮಾಜವಾದದ ತತ್ವದಿಂದ ಬಂದಂಥ ನಮ್ಮ ನಾಯಕರು ಇದರ ಬಗ್ಗೆ ಗಮನಹರಿಸಿ, ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಶೀಘ್ರವಾಗಿ ಮಾಡಬೇಕು. ತಾವು ಎಕ್ಸ್‌ಪರ್ಟ್ ಕಮಿಟಿ ಮಾಡಿ ಇಂಡಿವಿಜುಯಲ್ ಕಂಪೆನಿಗಳನ್ನು ತೆಗೆದುಕೊಂಡು ಅವುಗಳನ್ನು ಸರಿಪಡಿಸತಕ್ಕಂಥ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ಒಂದು ಇಲಾಖೆಗಳಲ್ಲಿ ಐಎಎಸ್ ಅಧಿಕಾರಿಗಳನ್ನು ಡೈರೆಕ್ಟರುಗಳಾಗಿ ತುಂಬುತ್ತಿದ್ದಾರೆ. ಇದನ್ನು ದಯವಿಟ್ಟು ತಪ್ಪಿಸಬೇಕು. ಐಎಎಸ್ ಅಧಿಕಾರಿಗಳನ್ನೇ ತುಂಬುವುದಾದರೆ ಅವರನ್ನು 50 ಪರ್ಸೆಂಟ್ ತುಂಬಿ, ಇನ್ನು ಉಳಿದ 50 ಪರ್ಸೆಂಟ್ ಸಮಾಜದಲ್ಲಿ ಸೇವೆ ಮಾಡಿರತಕ್ಕಂಥ ದಾನಿಗಳು ವಿಧಾನಸೌಧದೊಳಗೆ ಬಾರದೆ ಪೂರ್ತಿಯಾಗಿ ಹಣ್ಣಾಗಿ ಹಳ್ಳಿಗಳಲ್ಲೇ ಇದ್ದಾರೆ. ಅಂತಹವರನ್ನು ಹುಡುಕಿ ತಂದು, ಒಳ್ಳೆಯ ಅನುಭವ ಇರತಕ್ಕಂಥವರನ್ನು ತಂದು ಡೈರೆಕ್ಟರುಗಳನ್ನಾಗಿ ಮಾಡಿ. ಈ ರೀತಿ ಮಾಡುವುದರಿಂದ ಹಣ ಹೋಗುವುದು ತಪ್ಪುತ್ತದೆ. ಕಳೆದ 40 ವರ್ಷಗಳಿಂದ ಪಬ್ಲಿಕ್ ಅಂಡರ್ ಟೇಕಿಂಗ್ ಸೆಕ್ಟಾರ್‌ನಲ್ಲಿ ಏನೇನು ಕೆಲಸ ನಡೆದಿದೆ ಎನ್ನುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಈ ಹಣ ಪೋಲಾಗುವುದನ್ನು ತಪ್ಪಿಸಬೇಕೆಂದರೆ ವಿನಂತಿ ಮಾಡುತ್ತೇನೆ. ಇನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳಬೇಕೆಂದರೆ, ಮಾನ್ಯ ರಾಜಶೇಖರಮೂರ್ತಿಯವರು ಕಳೆದ ಸರ್ಕಾರದಲ್ಲಿ ಅತ್ಯುತ್ತಮವಾದಂಥ ಎಕ್ಸೈಜ್ ಮಿನಿಸ್ಟರ್ ಆಗಿದ್ದುದು ಎನ್ನುವ ಮಾತು ನಾನು ಹೇಳಿದ್ದು ಅಲ್ಲ, ವಿರೋಧಪಕ್ಷದಲ್ಲಿ ಕುಳಿತಿರತಕ್ಕಂಥ ಮಾನ್ಯ ಮಹನೀಯರು ಗೆಳೆಯರು ಹೇಳಿದಂಥ ಮಾತು. ಈಗ ಇವರು ಹೇಳುತ್ತಾರೆ, ಬಂಗಾರಪ್ಪನವರ ಸರ್ಕಾರ ರಾಜ್ಯದಲ್ಲಿ ಎಕ್ಸೈಜ್‌ನಲ್ಲಿ ಲೂಟಿ ಮಾಡುತ್ತಿದೆ ಎನ್ನತಕ್ಕ ಮಾತು ಹೇಳಿಕೊಂಡು ಗಂಟೆ ಬಾರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ರಾಜಶೇಖರ ಮೂರ್ತಿಯವರಿಗೆ ಬಹುಶಃ ತೆಗೆದುಕೊಳ್ಳುವುದು

ಗೊತ್ತಿಲ್ಲ. ಕುಡಿಯುವ ಚಟ ಗೊತ್ತಿಲ್ಲ. ಅವರಿಗೆ ಅದರ ಅನುಭವ ಇದ್ದರೆ ಒಂದು ರೂಪಾಯಿ 20 ರೂಪಾಯಿ ಮಾಡುತ್ತಾ ಇರಲಿಲ್ಲ. ಯಾರು ಯಾರು ಎಲ್ಲೆಲ್ಲಿ ಕುಡಿದರೋ ಅವರೆಲ್ಲಾ ಅಲ್ಲಲ್ಲಿ ಬೈದುಕೊಂಡು ಕುಳಿತುಕೊಂಡರು. ಬಿಲ್ ಕೊಡಲಿಕ್ಕೆ ಆಗದೇ ನಾವು ಎಷ್ಟೋ ದಿವಸ ಬೈದುಕೊಂಡು ಕುಳಿತುಕೊಂಡಿದ್ದಾರೆ. ಅಂಥ ಒಂದು ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಇವರು ಒಂದು ರೂಪಾಯಿಗೆ 20 ರೂಪಾಯಿ ಟ್ಯಾಕ್ಸ್ ಹಾಕಿದ ಮೇಲೆ 50-60 ಕೋಟಿ ರೂಪಾಯಿ ಹಣವನ್ನು ನಾವು ಕಟ್ಟಲಿಕ್ಕೆ ಆಗುವುದಿಲ್ಲ ಎಂದು ಯಾರು ಗುತ್ತಿಗೆ ಮಾಡಿಕೊಂಡಿದ್ದರು ಅವರು ಹಣ ಕಟ್ಟದೆ, ಕೋರ್ಟಿಗೆ ಹೋಗಿ ಸುಮಾರು 60-70 ಕೋಟಿ ರೂಪಾಯಿ ಹಣ ಪೆಂಡಿಂಗ್ ಇದೆ. ಇವರು ಎಕ್ಸೈಜಿನಲ್ಲಿ 550 ಕೋಟಿ ರೂಪಾಯಿ ವಸೂಲು ಮಾಡುತ್ತೇವೆಂದು ಹೇಳಿದ್ದರು, ನಾವು ಮಾರ್ಚಿ ತಿಂಗಳಲ್ಲಿ ಇದ್ದೇವೆ. 355 ಕೋಟಿ ರೂಪಾಯಿ ಈಗಾಗಲೇ ವಸೂಲು ಮಾಡಿದ್ದೇವೆ. ಉಳಿದ ಹಣ ಬಾಕಿ ಇರತಕ್ಕಂಥದ್ದು ವಸೂಲು ಮಾಡುವ ಮಟ್ಟಕ್ಕೆ ಹೋಗುತ್ತೇವೆ. ಈ ಸಂದರ್ಭದಲ್ಲಿ ಮಾನ್ಯ ಮೊಯಿಲಿಯವರ ಗಮನಕ್ಕೆ ತರುವಂತಾದ್ದು ಏನೆಂದರೆ, ಅವರು ಈ ಸಭೆಯಲ್ಲಿ ಈ ಕಡೆ ಕುಳಿತಾಗ ಬಾಟ್ಲಿಂಗ್ ಪ್ರಕರಣದ ಬಗ್ಗೆ ಬಹಳ ಹೋರಾಟ ಮಾಡಿದರು. ಇವೊತ್ತು ಎಲ್ಲೂ ಬಾಟ್ಲಿಂಗ್‌ನಲ್ಲಿ ಸಾರಾಯಿ ಕೊಡುತ್ತಿಲ್ಲ. ಎಲ್ಲಾ ಓಪನ್ ಆಗಿಯೇ ಹಳ್ಳಿಗಳಲ್ಲಿ ಕೊಡುತ್ತಿದ್ದಾರೆ.

ಸೀಲು ಹಾಕಿರುವಂತಾದ್ದು ಎಲ್ಲೂ ಇಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಿದರೆ 50 ಕೋಟಿ ರೂಪಾಯಿ ಸರ್ಕಾರಕ್ಕೆ ಉಳಿಯುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಾಟ್ಲಿಂಗ್ ನಿಲ್ಲಿಸಬೇಕೆಂದು ತಾವು ಹೇಳಿದಂತಹವರು. ಈಗ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿ ಬರುತ್ತಿದೆ. ಈ ಬಾಟ್ಲಿಂಗ್ ಮಾಡಿದಂಥ ಸಂದರ್ಭದಲ್ಲಿ ನಾವು ಬೀದಿ ಬೀದಿಯಲ್ಲಿ ಭಾಷಣ ಮಾಡಿದೆ, ಈ ಸರ್ಕಾರ ಮನೆಗೆ ಕಳುಹಿಸಬೇಕು, ಬಾಟ್ಲಿಂಗ್ ಪ್ರಕರಣದಲ್ಲಿ ಸರ್ಕಾರ ದುಡ್ಡು ತಿಂದಿದೆ, ಲೂಟಿ ಮಾಡಿದೆ. ಅನ್ಯಾಯ ಮಾಡಿದ್ದಾರೆ. ಆದ್ದರಿಂದ ಬಾಟ್ಲಿಂಗ್ ಪ್ರಕರಣದಲ್ಲಿ ಸರ್ಕಾರ ರಾಜೀನಾಮೆ ಕೊಡಬೇಕು ಎನ್ನತಕ್ಕ ಮಾತನ್ನು ಹೇಳಿದವರು ನಮ್ಮವರು. ಬಾಟ್ಲಿಂಗ್ ಏತಕ್ಕೆ ಇದುವರೆಗೂ ಬಿಟ್ಟುಕೊಂಡಿದ್ದೀರಿ. 50 ಕೋಟಿ ರೂಪಾಯಿ ಸರ್ಕಾರಕ್ಕೆ ಲಾಭ ಬರುತ್ತದೆ. ಆದ್ದರಿಂದ ಬಾಟ್ಲಿಂಗ್ ರದ್ದು ಮಾಡಿ ಏಕೆಂದರೆ ಎಲ್ಲೂ ಸಹಿತ ಬಾಟ್ಲಿಂಗ್ ಆಗುತ್ತಿಲ್ಲ. ಈ ಸಂದರ್ಭದಲ್ಲಿ ಬಾಟ್ಲಿಂಗ್ ರದ್ದು ಮಾಡಬೇಕು ಎನ್ನತಕ್ಕ ಮಾತನ್ನು ನಾನು ಒತ್ತಾಯ ಮಾಡಿ ಹೇಳುತ್ತೇನೆ. ಇದು ಕೇವಲ 6 ಜನರ ಮನೆಗೆ ಮಾತ್ರ ಹೋಗುತ್ತದೆ. 50 ಕೋಟಿ ರೂಪಾಯಿ ದುಡ್ಡು ಕೇವಲ 6 ಕುಟುಂಬಗಳಿಗೆ ಹೋಗುತ್ತಿದೆ. ಇದನ್ನು ತಪ್ಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸಿಂಧ್ಯರವರು ಹೇಳಿದರು, ಸಿ.ಎಲ್-2. ಸಿಎಲ್-4, ಸಿಎಲ್-5, ಸಿಎಲ್-9 ಅಂತ. ಇದು ಬಹಳ ಜನರಿಗೆ ಅರ್ಥವಾಗುವುದಿಲ್ಲ, ಈ ರುಚಿ ಗೊತ್ತಿರುವವರಿಗೆ ಮಾತ್ರ ಅರ್ಥವಾಗುತ್ತದೆ. ಮಾನ್ಯ ಪಾಟೀಲರಿಗೆ ಇದು ಅರ್ಥವೇ ಆಗುವುದಿಲ್ಲ. ಸಿಎಲ್ ಎಂದರೆ ಅವರಿಗೆ ಗೊತ್ತಾಗುವುದಿಲ್ಲ. ಸಿಎಲ್ - 4 ಎಂದರೂ ಗೊತ್ತಾಗುವುದಿಲ್ಲ. ಸ್ವಾಮಿ, 30 ಸಾವಿರ ರೂ. ಇದ್ದಂಥ ಲೈಸೆನ್ಸ್‌ನ್ನು ಏಕದಂ ಒಂದು ಲಕ್ಷ ಎಂದು ಮಾಡಿದರೆ ಯಾರು ಕಟ್ಟುವುದಕ್ಕಾಗುತ್ತದೆ? ಅವರು ಕೋರ್ಟ್‌ಗೆ ಹೋಗಿ ಸ್ಟೇ ತರುತ್ತಾರೆ. ಅಂಗಡಿಗಳನ್ನು ನಡೆಸುವುದಕ್ಕಾಗುವುದಿಲ್ಲವೆಂದು ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ. ದುಡ್ಡು ಕಟ್ಟುವುದಿಲ್ಲ. ಕಳೆದ ವರ್ಷ ಸಿಎಲ್ -2 ಸಿಎಲ್-4, ಸಿಎಲ್-7, ಸಿಎಲ್-9ನಿಂದ ಅಂದರೆ ಅಂಗಡಿ, ಹೋಲ್‌ಸೇಲ್ ಬಾರ್ ಮತ್ತು ರೆಸ್ಟೋರೆಂಟ್‌ನಿಂದ ತಿಂಗಳಿಗೆ ಸಿಎಲ್-4ರಲ್ಲಿ ಸುಮಾರು 50 ಸಾವಿರದಿಂದ ಒಂದು ಲಕ್ಷ ಎಂದು ಮಾಡಿದಿರಿ. ಇದಕ್ಕೆ ಅಡ್ಡಿ ಏನೂ ಇಲ್ಲ. ಆದರೆ ರಿಟೇಲ್ ಶಾಪ್‌ಗಳಿಗೆ

ಲೈಸೆನ್ಸ್ ಫೀಸನ್ನು ಜಾಸ್ತಿ ಮಾಡಿರುವುದನ್ನು ದಯವಿಟ್ಟು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ಎಲ್ಲಾ 4 ಬಾಬುಗಳ ಲೈಸೆನ್ಸ್ ಫೀಸ್‌ನಿಂದ 15 ಕೋಟಿ ರೂಪಾಯಿ ಬರುತ್ತಿತ್ತು. ಈ ವರ್ಷ 30 ಕೋಟಿಗೆ ಹೋಗಿದೆ. ಕೇವಲ 15 ಕೋಟಿಗೋಸ್ಕರ ಈ ರಾಜ್ಯದ ಜನರ ಮೇಲೆ ಹೊರೆ ಹಾಕುತ್ತಿದ್ದೀರಿ. ಇದು ಸೂಕ್ತವಲ್ಲ. ಇದನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುಕೊಳ್ಳುತ್ತೇನೆ.

ಇವತ್ತು 1:1 ಎಂದು ನಮ್ಮ ಸರ್ಕಾರ ಜಾರಿಗೆ ತಂದಿದೆ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು 1:1 ಅಲ್ಲ, ಒಬ್ಬ ಬೇನಾಮಿ ಹೆಸರಿನಲ್ಲಿ 150 ಅಂಗಡಿಗಳನ್ನು, ಬಾರ್‌ಗಳನ್ನು ನಡೆಸುತ್ತಿರುವ ಬಗ್ಗೆ ನಮ್ಮ ಹತ್ತಿರ ಲಿಸ್ಟ್ ಇದೆ. ಒಬ್ಬನೇ ಬೇನಾಮಿ ಹೆಸರಿನಲ್ಲಿ ಮಾಡಿರತಕ್ಕ 150 ಅಂಗಡಿಗಳಿವೆ. ಇದರ ಬಗ್ಗೆ ಸರ್ಕಾರ ಸಮಗ್ರವಾದ ತನಿಖೆಯನ್ನು ಮಾಡಿಸಿ, ಯಾರು 1:1 ಎಂದು ಪಾಲಿಸಿ ಮಾಡಿದ್ದಾರೆ ಅದನ್ನು ಜಾರಿಗೆ ತರಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎಜುಕೇಶನ್ ಬಗ್ಗೆ ಹೇಳುವುದಾದರೆ ಮೊದಲು ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವಿದ್ಯಾಭ್ಯಾಸದ ತಾರತಮ್ಯವನ್ನು ಹೋಗಲಾಡಿಸಬೇಕು. ಇದನ್ನು ಸರಿಪಡಿಸಲು ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯಮಾಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಅಂದರೆ ನನ್ನ ತಾಲೂಕಿನಲ್ಲಿ ಒಬ್ಬರು ಮ್ಯಾತ್ಮೆಟಿಕ್ಸ್ ಲೆಕ್ಚರರ್ ಇಲ್ಲದೇ ಕಳೆದ 4 ವರ್ಷಗಳಿಂದ ಒಂದು ಜ್ಯೂನಿಯರ್ ಕಾಲೇಜು ನಡೆಯುತ್ತಿದೆ. ಇಂಗ್ಲೀಷ್ ಲೆಕ್ಚರರ್ ಇಲ್ಲದೆ ಕಳೆದ 5 ವರ್ಷಗಳಿಂದ ಒಂದು ಜ್ಯೂನಿಯರ್ ಕಾಲೇಜು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ರಾಜ್ಯದಲ್ಲಿ ಕೇವಲ ಗ್ರಾಮಾಂತರ ಪ್ರದೇಶಕ್ಕೆ ಸುಮಾರು 20ಸಾವಿರ ಉಪನ್ಯಾಸಕರು ಕೊರತೆ ಇರುವುದನ್ನು ನಾವು ನೋಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಉಪಾಧ್ಯಾಯರು ಇಲ್ಲ, ಇಂಗ್ಲೀಷ್ ಲೆಕ್ಚರರ್ಸ್ ಇಲ್ಲ ಮ್ಯಾತ್ಮೆಟಿಕ್ಸ್ ಲೆಕ್ಚರರ್ ಇಲ್ಲ ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಹೊಟ್ಟೆಗೆ ಊಟವೇ ಇಲ್ಲದೆ ಓದಿರತಕ್ಕ ವಿದ್ಯಾರ್ಥಿಗಳು ನಗರದಲ್ಲಿ ವಿದ್ಯಾಭ್ಯಾಸವನ್ನು ಮಾಡಿದಂಥ ಅಂದರೆ ಸೋಫಿಯಾ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿದಂಥ ಬಾಲ್ಡ್‌ವಿನ್‌ನಲ್ಲಿ ವಿದ್ಯಾಭ್ಯಾಸ ಮಾಡಿದಂಥ ಬಿಷಪ್ ಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದಂಥ ಪೂರ್ಣಪ್ರಜ್ಞದಲ್ಲಿ ವಿದ್ಯಾಭ್ಯಾಸವನ್ನು ಮಾಡಿದಂಥ ಮಕ್ಕಳ ಜೊತೆ ಈ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಪೈಪೋಟಿಗೆ ಕರೆಯುತ್ತೀರಿ. ನೌಕರಿಯನ್ನು ಕೊಡುವುದರಲ್ಲಿ ಪೈಪೋಟಿಗೆ ಕರೆಯುತ್ತೀರಿ. ಮೆಡಿಕಲ್ ಸೀಟ್ ಹಂಚುವಾಗ ಪೈಪೋಟಿಗೆ ಕರೆಯುತ್ತೀರಿ. ಯಾವುದು ಈ ರಾಜ್ಯದಲ್ಲಿ ಉನ್ನತ ಶಿಕ್ಷಣ ಇದೆ ಜವಾಬ್ದಾರಿ ಹುದ್ದೆಗಳಿಗೆ ಹೋಗತಕ್ಕ ಶಿಕ್ಷಣವನ್ನು ಪಡೆಯುವುದಕ್ಕೆ ಪೈಪೋಟಿಗೆ ಕರೆಯುತ್ತೀರಿ. ಆ ವಿದ್ಯಾರ್ಥಿಗಳು ಏನು ಮಾಡಬೇಕು? ನಗರದ ವಿದ್ಯಾರ್ಥಿಗಳ ಮೇಲೆ ಪೈಪೋಟಿ ಮಾಡಲು ಸಾಧ್ಯವೆ? ಹಾಗಾದರೆ ಬಡ ಬೋರೇಗೌಡನ ಮಕ್ಕಳು ಐ.ಎ.ಎಸ್. ಮಾಡುವುದು ಬೇಡವೇ? ಬಡ ಬೋರೆಗೌಡನ ಮಕ್ಕಳು ಮೆಡಿಕಲ್‌ಗೆ ಹೋಗುವುದು ಬೇಡವೇ ಬಡ ಬೋರೇಗೌಡನ ಮಕ್ಕಳು ಇಂಜಿನಿಯರ್‌ಗೆ ಹೋಗೋದು ಬೇಡವೇ? ನೀವೇ ಯೋಚನೆ ಮಾಡಿ. ಆದುದರಿಂದ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉಚಿತ ಶಿಕ್ಷಣವನ್ನು ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ. ಈ ಜವಾಬ್ದಾರಿಯನ್ನು ಎಷ್ಟೇ ಕಳಕಳಿಯಿಂದ ಮಾಡುವುದಕ್ಕೆ ಹೊರಟರೂ ಕೂಡ ಇದುವರೆಗೂ ಈ ಜವಾಬ್ದಾರಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಬಹಳ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೂ ಸಾಧ್ಯವಾಗುತ್ತಿಲ್ಲ ನಾನು ತಮಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ನಗರದಲ್ಲಿ ವಿದ್ಯಾಭ್ಯಾಸವನ್ನು ಮಾಡಿದಂಥ ಒಂದು ವರ್ಗ ಮಾಡಿ, ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದಂಥ ಮಕ್ಕಳನ್ನು ಒಂದು ವರ್ಗ ಮಾಡಿ ಇವತ್ತು 75 ಪರ್ಸೆಂಟ್ ತೆಗೆದುಕೊಳ್ಳತಕ್ಕ ವಿದ್ಯಾರ್ಥಿಗಳಿಗೆ ನೀವು ಮೆಡಿಕಲ್ ಸೀಟನ್ನು ಕೊಡುವುದಾದರೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ವಿದ್ಯಾರ್ಥಿಗಳಿಗೆ 40 ಪರ್ಸೆಂಟ್‌ಗೆ ಮೆಡಿಕಲ್ ಸೀಟ್ ಕೊಡಲು ಇಳಿಸಬೇಕು. ಇವತ್ತು ಬಿ.ಎ. ಮಾಡಿರತಕ್ಕ ವಿದ್ಯಾರ್ಥಿಗೆ ಒಂದು ಲೀವ್ ಲೆಟರ್‌ನ್ನು ಬರೆಯುವುದಕ್ಕೆ ಬರುವುದಿಲ್ಲ. ಅದೂ ಬೇಡ ಇವತ್ತು 2ನೇ ಕ್ಲಾಸ್‌ನಲ್ಲಿ ಓದುತ್ತಿರುವ ನನ್ನ ಮಗನ ಜೊತೆಯಲ್ಲಿ ಕೂಡ ನಾನು ಇಂಗ್ಲೀಷಿನಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ ಗ್ರಾಮಾಂತರ ಪ್ರದೇಶದ ಬಗ್ಗೆ ನಾವೆಲ್ಲರೂ ಇಲ್ಲಿ ಭಾಷಣ ಮಾಡುತ್ತೇವೆ ಆದರೆ ನಿಮಗೆ ಎಷ್ಟೇ ಕಾಳಜಿ ಇದ್ದರೂ ಕೂಡ ಸಮರ್ಪಕವಾಗಿ ಮಾಡಲಿಕ್ಕೆ ಆಗಿಲ್ಲ, ಆದುದರಿಂದ ಗ್ರಾಮಾಂತರ ಪ್ರದೇಶಕ್ಕೆ ಬೇರೆ ವರ್ಗ ಸಿಟಿಯಲ್ಲಿ ಓದತಕ್ಕವರಿಗೇ ಬೇರೆ ವರ್ಗ ಎಂದು ಮಾಡಿ ಇದನ್ನು ಸರ್ಕಾರ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಕ್ಯಾಪಿಟೇಶನ್ ಶುಲ್ಕ ಕಾನೂನಿನಲ್ಲಿ ಸ್ಪಷ್ಟವಾಗಿದೆ. ನಾನು ಕಳೆದ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಯಾರು ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುತ್ತಿರುತ್ತಾರೆ ಅವರಿಗೆ ಏನು ತಾವು ಮಾಡುತ್ತೀರೆಂದು ಅದಕ್ಕೆ ಸರ್ಕಾರ ಉತ್ತರ ಏನು ಕೊಟ್ಟಿದೆ ಎಂದರೆ ಬಹಳ ಕಠಿಣವಾದ ಕಾನೂನು ಇದೆ. ಒಂದು ವರ್ಷ ಸಜ 500 ರೂಪಾಯಿಗಳ ದಂಡವಿದೆ ಎಂದು ಇವತ್ತು ಕ್ಯಾಪಿಟೇಷನ್ ಹಾವಳಿ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಬೆಂಗಳೂರು ನಗರಕ್ಕೆ ಇದು ಸೀಮಿತವಾಗಿಲ್ಲ, ಮೈಸೂರು ನಗರಕ್ಕೆ ಸೀಮಿತವಾಗಿಲ್ಲ, ರಾಜ್ಯದ ಯಾವುದೇ ಭಾಗಕ್ಕೂ ಸೀಮಿತವಾಗಿಲ್ಲ. ಹಾವಳಿಯನ್ನು ತಡೆಯಲು ಒಂದು ಕಾನೂನನ್ನು ತಂದರೂ ಸಹಿತ ಆ ವರ್ಷವೇ ನರ್ಸರಿಯಿಂದ ಹಿಡಿದು ಎಲ್ಲ ಮಟ್ಟದವರೆಗೂ ಸಹ ಶಾಲೆಗೆ ದುಡ್ಡಿಲ್ಲದೆ ಸೀಟು ಸಿಕ್ಕುವುದಿಲ್ಲ ಕಳೆದ ಅಧಿವೇಶನದಲ್ಲಿ ಮಾನ್ಯ ಆರೋಗ್ಯ ಸಚಿವರಾಗಿದಂಥ ಶ್ರೀಮತಿ ಮನೋರಮ ಮಧ್ವರಾಜ್‌ರವರು ಒಂದು ಮಾತನ್ನು ಹೇಳಿದ್ದರು. ಯಾರು ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳುತ್ತಾರೆಂಬುದನ್ನು ರೈಟಿಂಗ್‌ನಲ್ಲಿ ಕೊಡಿ ಎಂದು ಹೇಳಿದ್ದರು. ರಾಜ್ಯದಲ್ಲಿ ಹೆಲ್ಮೆಟ್ ಹಾಕಿಕೊಳ್ಳದೆ ರಸ್ತೆಯಲ್ಲಿ ಹೋದರೆ ನೂರು ರೂಪಾಯಿಗಳ ದಂಡವನ್ನು ಹಾಕುವಂಥ ಕಾನೂನು ತಂದಿರುವಾಗ ಹಗಲು ದರೋಡೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ.

ಬಿಷಪ್ ಕಾಟನ್ ಕಾನ್ವೆಂಟಿನಲ್ಲಿ 20 ಸಾವಿರ ರೂಪಾಯಿಗಳನ್ನು ಕೊಡದೆ ಸೀಟು ಸಿಗುವಂಥ ಪರಿಸ್ಥಿತಿ ಇಲ್ಲ 20-30-40 ಸಾವಿರ ರೂಪಾಯಿಗಳವರೆಗೆ ಫಸ್ಟ್ ಸ್ಟಾಂಡರ್ಡ್‌ಗೆ ವ್ಯವಸ್ಥೆ ಇದೆ. ಆದ್ದರಿಂದ ಸರ್ಕಾರಕ್ಕೆ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ ತಾವು ಇದಕ್ಕೆ ಒಂದು ಸಮಗ್ರವಾಗಿ ತನಿಖೆ ಮಾಡಿ ಯಾರು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಮಾತನಾಡಿದ್ದಾರೆ ಅದರ ಬಗ್ಗೆ ಚಿಂತನೆ ಮಾಡಿ, ಕಾನೂನನ್ನು ಸ್ಟ್ರಿಕ್ಟ್ ಆಗಿ ಜಾರಿಗೆ ತರಬೇಕು. ತಮ್ಮಂಥ ಮುತ್ಸದ್ದಿ ನಾಯಕರು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು ಯಾರು ಕಾನೂನನ್ನು ಉಲ್ಲಂಘನೆ ಮಾಡುತ್ತಾರೋ ಅಂಥವರೆಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ಅವರು ಎಷ್ಟೇ ದೊಡ್ಡವರಿರಲಿ ಚಿಕ್ಕವರಿರಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವಂಥಾದ್ದಾಗಬೇಕು. ಇವತ್ತು ನಗರಗಳಲ್ಲಿ ಸುಸಜ್ಜಿತವಾದಂಥ ಮನೋಭಾವನೆಯಿಂದ ಕೂಡಿದ ಕಾನೂನು ಇದ್ದರೂ ಬಡ ಬೋರೇಗೌಡನ ಮಕ್ಕಳಿಗೆ ಸೀಟು ಸಿಕ್ಕುತ್ತಿಲ್ಲ, ಎಲ್ಲಿ ನಗರವಾಸಿಗರಿಗೆ ಸಿಕ್ಕುತ್ತದೆ. ಆದ್ದರಿಂದ ಈ ತಾರತಮ್ಯವನ್ನು ಸರಿಪಡಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ನಮ್ಮ ಸರ್ಕಾರ ಬಡವರ ಪರವಾಗಿ ಇರತಕ್ಕಂಥ ಸರ್ಕಾರ ಅದಕ್ಕಾಗಿ ಈ ಒಂದು ಆಯವ್ಯಯವನ್ನು ದೀನದಲಿತರ ಉದ್ಧಾರಕ್ಕಾಗಿ ಮಾಡಿದೆ ಮಾನ್ಯ ಅರಸುರವರಾಗಲಿ ಮಾನ್ಯ ಬೊಮ್ಮಾಯಿಯವರಾಗಲಿ ಒತ್ತುವರಿ ಜಮೀನನ್ನು ಸಕ್ರಮ ಮಾಡಿಕೊಡಿ ಎಂದು ಕೇಳಿಕೊಂಡಿದ್ದರೂ ಮಾಡಿಕೊಟ್ಟಿರಲಿಲ್ಲ ಆದರೆ ಈಗ ನಾವು ಮೊದಲಬಾರಿಗೆ ಇಂಥದ್ದನ್ನು ನಮ್ಮ ಸರ್ಕಾರ ಮಾಡಿದೆ ಇಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನರ ಆಗುಹೋಗುಗಳಿಗೆ ಸ್ಪಂದಸುತ್ತಿರುವಂಥ ಆಯವ್ಯಯವನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಾವು ಕೊಟ್ಟಿರತಕ್ಕಂಥ ಕೆಲವು ಸಲಹೆಗಳನ್ನು ತೆಗೆದುಕೊಂಡು ಅದನ್ನು ಜಾರಿಗೆ ತರಬೇಕೆನ್ನುವ ಮಾತನ್ನು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಾಟೀಲ ರುದ್ರಗೌಡ ತಿಕ್ಕಣಗೌಡ (ರಾಮದುರ್ಗ) : ಮಾನ್ಯ ಸಭಾಧ್ಯಕ್ಷಣಿಯವರೇ ನಾನು ಒಂದೇ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಎಲ್ಲ ಮಿತ್ರರು ಕೊಳವೆ ಬಾವಿಗಳನ್ನು ಕೊರೆದು ನೀರನ್ನು ಒದಗಿಸಬೇಕೆನ್ನುವ ವಿಚಾರವನ್ನು ಹೇಳಿದ್ದಾರೆ. ಆದರೆ ಎಷ್ಟು ಕೊಳವೆಬಾವಿಗಳನ್ನು ಕೊರೆದರು ಒಂದು ಬಾವಿಯಲ್ಲಿ ನೀರು ಬರಲಿಲ್ಲ ಸುಮ್ಮನೆ ಕೊಳವೆಬಾವಿಗಳನ್ನು ಕೊರೆದು ಹಣವನ್ನು ಪೋಲು ಮಾಡುವುದಕ್ಕೆ ಬದಲು ಒಂದೊಂದು ಗ್ರಾಮಕ್ಕೂ ಗೋಕಟ್ಟೆಯನ್ನು ಮಾಡಬೇಕು ಇದರಿಂದ ಮನುಷ್ಯರಿಗೆ ನೀರನ್ನು ಒದಗಿಸಲು ಅನುಕೂಲವಾಗುವುದಲ್ಲದೆ ದನಕರುಗಳು ನೀರನ್ನು ಕುಡಿಯಲು ಅನುಕೂಲವಾಗುತ್ತದೆ. ಆದ್ದರಿಂದ ಹಳ್ಳಿಹಳ್ಳಿಗಳಲ್ಲಿ ಒಂದೊಂದು ಗೋಕಟ್ಟೆಯನ್ನು ಕಟ್ಟಲು ಜಿಲ್ಲಾಪರಿಷತ್ತಿಗೆ ಗೈಡ್‌ಲೈನ್ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರ ಕೊನೆಪಕ್ಷ ಸ್ಕೇರ್‌ಸಿಟಿ ಹಣದಿಂದಲಾದರೂ ಇದೇ ವರ್ಷ ಹಳ್ಳಿಹಳ್ಳಿಗಳಲ್ಲಿ ಗೋಕಟ್ಟೆಯನ್ನು ಕಟ್ಟಿಸಿದರೆ ಮುಂದೆ ಬರತಕ್ಕಂಥ ಮಳೆಗಾಲದಲ್ಲಿ ಅಷ್ಟೋ ಇಷ್ಟೋ ಗೋಕಟ್ಟೆಗಳಲ್ಲಿ ನೀರು ಬಂದರೆ ದನಕರುಗಳಿಗೆ ನೀರು ಸಿಗುತ್ತದೆನ್ನುವ ವಿಚಾರ ಇದು ಕೇವಲ ಮತಗಳಿಸುವುದಕ್ಕೆ ಬಳಕೆಯಾಗಬಾರದು. ಜನರು ಬದುಕಲಿಕ್ಕೆ ಆಗಬೇಕು ಎನ್ನುವ ವಿಚಾರ ನನ್ನದು. ಒಂದು ಉದಾಹರಣೆಯನ್ನು ಹೇಳುತ್ತೇನೆ 30 ವರ್ಷಗಳ ಹಿಂದೆ ನಮ್ಮ ಭಾಗದಲ್ಲಿ ಹರಿನಾಲ ಎನ್ನತಕ್ಕಂಥ ಯೋಜನೆಯನ್ನು ಪ್ಲಾನಿಂಗ್ ಕಮಿಷನ್ ಅಪ್ರೂವ್ ಮಾಡಿತ್ತು. 10-12 ಬಿಲ್ಡಿಂಗ್‌ಗಳನ್ನು ಸಹ ಕಟ್ಟಿಸಲಾಗಿತ್ತು ಯಾವುದೋ ಒಬ್ಬ ದೊಡ್ಡ ಶ್ರೀಮಂತರ ಜಮೀನು ಮುಳುಗಡೆಯಾಗುತ್ತದೆನ್ನುವ ಉದ್ದೇಶದಿಂದ ಇದುವರೆಗೆ ಅದನ್ನು ತೆಗೆದುಕೊಳ್ಳಲಿಲ್ಲ. ಸರ್ಕಾರ ಇತ್ತಕಡೆ ಗಮನ ಹರಿಸುತ್ತದೆಯೋ ಇಲ್ಲವೋ ಎಂದು ಕೇಳುತ್ತಿದ್ದೇನೆ. ಇಂಥ ಒಳ್ಳೆಯ ಯೋಜನೆಗಳನ್ನು ಸರ್ಕಾರ ಕೈಗೊಂಡಲ್ಲಿ ಕುಡಿಯುವ ನೀರು ದೊರೆಯುತ್ತದೆ. ಮತ್ತು ನೀರಾವರಿಯೂ ಆಗುತ್ತದೆ. ಆ ಕಾರಣದಿಂದ ಗೋಕಟ್ಟೆಗಳನ್ನು ಕಟ್ಟುವುದರ ಜೊತೆಗೆ ದನಕರುಗಳಿಗೆ ಅನುಕೂಲ ಮಾಡಿಕೊಡಬೇಕೆನ್ನುವ ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಮಾನ್ಯ ಆರ್ಥಿಕ ಮಂತ್ರಿಗಳು ಹಾಗೂ ಮುಖ್ಯಮುಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ವಿರೋಧಿಸಿ ಎರಡು ಮಾತುಗಳನ್ನಾಡಬಯಸುತ್ತೇನೆ. ಇವತ್ತಿನ ದಿವಸ ಈ ಒಂದು ಆಯವ್ಯಯವನ್ನು ನೋಡಿದಾಗ ಒಂದು ವಿಷಾದ ಅನ್ನಿಸುವುದೇನೆಂದರೆ ಯಾವುದೇ ಹೊಸ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ನಮೂದು ಮಾಡಿಲ್ಲ. ಇದನ್ನು ನೋಡಿದಾಗ ಬಹಳ ಖೇದವಾಗುತ್ತದೆ ಇವತ್ತಿನ ದಿವಸ ಯಾವುದೇ ವಿಷಯವನ್ನು ತೆಗೆದುಕೊಳ್ಳಿ ಅದು ನೀರಾವರಿ ಇರಬಹುದು ವಿದ್ಯಾಭ್ಯಾಸ ಇರಬಹುದು ಕೈಗಾರಿಕೆ ಇರಬಹುದು ಬೇರೆ ಯಾವುದೇ ವಿಷಯವನ್ನು ತೆಗೆದುಕೊಂಡರೂ ಆಯವ್ಯಯದಲ್ಲಿ ಹಣವನ್ನು ಇಡದಿರುವುದು ಕಂಡು ಬರುತ್ತದೆ. ಇವತ್ತಿನ ದಿವಸ

ವಿದ್ಯಾ ಇಲಾಖೆಯಲ್ಲಿ ಲೈಬ್ರರಿ ಸಲುವಾಗಿ ಪುಸ್ತಕಗಳನ್ನು ಸಂಗ್ರಹ ಮಾಡುತ್ತಾರೆ. ಲೈಬ್ರರಿ ಫೀಸ್ ಎಂದು ಕಲೆಕ್ಟ್ ಮಾಡಿದರೂ ಆಯವ್ಯಯದಲ್ಲಿ ಲೈಬ್ರರಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಇಡಲಾಗಿದೆ. ಕಾರ್ಕಳ ಒಂದು ಕಡೆಗೆ ಮಾತ್ರ ಆ ಹಣವನ್ನು ಕೊಡಲಾಗಿದೆ. ಬೇರೆ ಎಲ್ಲಿಯೂ ಕೊಟ್ಟಿರುವುದಿಲ್ಲ. ಬೇರೆ ಬೇರೆ ಕಡೆಯೂ ಕೊಡುವ ವ್ಯವಸ್ಥೆ ಮಾಡಬೇಕು ಜೊತೆಗೆ ಲೈಬ್ರರಿ ಕಟ್ಟಡಗಳನ್ನು ಕಟ್ಟುವಂತಹ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇವೆ. ಇವತ್ತಿನ ದಿವಸ ಲೈಬ್ರರಿಯನ್ ಕೇವಲ 300 ರೂಪಾಯಿಗಳನ್ನು ಕೊಡುತ್ತಿದ್ದಾರೆ.

ಮಿನಿಮಂ ವೇಜ್ ಆಕ್ಟ್ ಪ್ರಕಾರ ತಿಂಗಳಿಗೆ 500 ರೂಪಾಯಿಗಳನ್ನಾದರೂ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕ್ಯಾಪಿಟೇಷನ್ ಫೀ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ. ಕ್ಯಾಪಿಟೇಷನ್ ಫೀ ತೆಗೆದುಕೊಳ್ಳಲು ಸರ್ಕಾರದವರೇ ಉತ್ತೇಜನ ಕೊಡುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ ಜ್ಯೂನಿಯರ್ ಕಾಲೇಜು ಮತ್ತು ಹೈಸ್ಕೂಲ್ ತೆಗೆಯುವ ಸಂದರ್ಭದಲ್ಲಿ ನೋ ಗ್ರಾಂಟ್ ಫಾರ್ ಎವರ್ ಎಂದು ಹೇಳಿ ಹೈಸ್ಕೂಲ್ ಮತ್ತು ಜ್ಯೂನಿಯರ್ ಕಾಲೇಜುಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಅವರು ಮಕ್ಕಳ ಕಡೆಯಿಂದಲಾದರೂ ತೆಗೆದುಕೊಳ್ಳಬೇಕು ಅಥವಾ ಪಾಲಕರಿಂದಲಾದರೂ ತೆಗೆದುಕೊಳ್ಳಬೇಕು. ಹೀಗೆ ಎಲ್ಲಿ ಯಾದರೂ ಹಣ ತೆಗೆದುಕೊಂಡು ಶಾಲೆ ನಡೆಸಬೇಕು ಆದ್ದರಿಂದ ಮೊದಲಿದ್ದ ಪದ್ಧತಿಯ ಪ್ರಕಾರ ಹೈಸ್ಕೂಲ್ ಅಥವಾ ಜೂನಿಯರ್ ಕಾಲೇಜುಗಳಿಗೆ 5 ವರ್ಷ ಆದನಂತರ ಗ್ರಾಂಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

(ಮಾನ್ಯ ಅಧ್ಯಕ್ಷರು ಶ್ರೀ ಎಸ್.ಎಂ. ಕೃಷ್ಣರವರು ಪೀಠವನ್ನಲಂಕರಿಸಿದರು)

ಇವತ್ತಿನ ದಿವಸ ಇರಿಗೇಷನ್ ಸಲುವಾಗಿ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದಾರೆಂದು ಮುಖ್ಯಮಂತ್ರಿಗಳು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 1991-92ರ ಆಯವ್ಯಯದಲ್ಲಿ ವರಾಹಿ ಪ್ರಾಜೆಕ್ಟ್‌ಗೆ ಒಂದು ಪೈಸೆ ಕೂಡ ರೊಕ್ಕ ಇಟ್ಟಿಲ್ಲ. ವೀರೇಂದ್ರ ಪಾಟೀಲರು 10 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರು. ಇವರು ಒಂದು ಪೈಸೆ ಇಟ್ಟಿಲ್ಲ ಉತ್ತರ ಕರ್ನಾಟಕದಲ್ಲಿ ಬರತಕ್ಕ ಹಿಪ್ಪರಗಿ ಪ್ರಾಜೆಕ್ಟ್‌ಗೆ ಈ ವರ್ಷ ಇಟ್ಟ ಹಣವನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅದಕ್ಕೆ ಯುಟಿಲೈಸೇಷನ್ ಮಾಡಿಲ್ಲ. ಹೀಗೆ ಯಾವುದೇ ಒಂದು ಇರಿಗೇಷನ್ ಪ್ರಾಜೆಕ್ಟಿಗೂ ಹಣವನ್ನು ಇಟ್ಟಿಲ್ಲವೆಂದು ಹೇಳಬಹುದು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಗ್ಗೆ ಮೇಲಿಂದ ಮೇಲೆ ಹೇಳುತ್ತಿದ್ದೇವೆ. ಅದು ಒಳ್ಳೆಯ ಸ್ಕೀಂ ಇದ್ದರೂ ಅದರ ಅಭಿವೃದ್ಧಿಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಇವತ್ತಿನ ದಿವಸ ಲಿಫ್ಟ್ ಇರಿಗೇಷನ್ ಸ್ಕೀಂನಲ್ಲಿ ಎರಡು ಕೋಟಿ ರೂಪಾಯಿಗಳನ್ನು ಸ್ಯಾಲರಿ ಸಲುವಾಗಿ ಖರ್ಚು ಮಾಡುತ್ತಿದ್ದಾರೆ ಡೆವಲಪ್‌ಮೆಂಟ್ ವರ್ಕ್ಸ್ ಸಲುವಾಗಿ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಕೊಡತಕ್ಕ ಹಣ ಸ್ಯಾಲರಿ ಸಲುವಾಗಿ ಹೆಚ್ಚಿಗೆ ಖರ್ಚಾಗುತ್ತಿದೆಯೇ ಹೊರತು ಅಭಿವೃದ್ಧಿ ಕೆಲಸಕಾರ್ಯಗಳಿಗೆ ಉಪಯೋಗವಾಗುತ್ತಿಲ್ಲ ಬೆಳಗಾಂನಲ್ಲಿ ಮಲಪ್ರಭಾ ಕಾಡಾ ಪ್ರಾಜೆಕ್ಟ್ ಇದ್ದರೆ ಆಯವ್ಯಯದಲ್ಲಿ ಅದಕ್ಕೆ 584 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ ಕೇವಲ 280ಕೋಟಿ ರೂಪಾಯಿಗಳನ್ನು ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ. ಉಳಿದ ಹಣ ಲ್ಯಾಪ್ಸ್ ಆಯಿತು. ಕಾರಣವೇನೆಂದರೆ ಎಲ್.ಓ.ಸಿ. ಬಿಡುಗಡೆ ಆಗುತ್ತಿಲ್ಲ ಎಂದು ಮುಳುಗಡೆ ಪ್ರದೇಶದ ಜನರಿಗೆ ಇದ್ದ ಸವಲತ್ತನ್ನು ನಮ್ಮ ಸರ್ಕಾರ ಕೊಡುತ್ತಿಲ್ಲವೆಂದು ಹೇಳಬಹುದು. ಕಾಡಾ ಛೇರ್ಮನ್ ಅಪಾಯಿಂಟ್‌ಮೆಂಟ್ ಎರಡು ವರ್ಷದಿಂದ ಆಗಿಲ್ಲ. ಛೇರ್ಮನ್ ಅಪಾಯಿಂಟ್‌ಮೆಂಟ್ ಆಗದೆ ಕೆಲಸ ಯಾವ ರೀತಿ ನಡೆಯಲಿಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ಇರಿಗೇಷನ್‌ಗೆ ಹೆಚ್ಚು ಪ್ರೋತ್ಸಾಹ ಕೊಡುತ್ತೇವೆ ಎನ್ನುವಾಗ ತಾವು ಹಣ ಆಫೀಸ್ ಸ್ಯಾಲರಿ ಸಲುವಾಗಿ ಖರ್ಚಾಗುತ್ತಿದೆಯೇ ವಿನಹ ಯಾವುದೇ

ಡೆವಲಪ್ಮೆಂಟ್ ಆಗುತ್ತಿಲ್ಲ ಎಂದು ಮೇಲಿಂದ ಮೇಲೆ ಹೇಳಬಹುದು. ವಾಟರ್ ಸಪ್ಲೈ ಸಲುವಾಗಿ ಮೊದಲಿನಿಂದಲೂ ಕೇಳುತ್ತಿದ್ದೇವೆ.

ಕಾಡಾ ಪ್ರಾಜೆಕ್ಟ್‌ನಲ್ಲಿ ಬರತಕ್ಕ ವಾಟರ್ ಸಪ್ಲೈ ಕೆಲಸವನ್ನು ರೆಗ್ಯುಲರ್ ಕೆಲಸದಲ್ಲಿ ತೆಗೆದುಕೊಳ್ಳುತ್ತಿಲ್ಲ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮುಗಿಸಿದ ನಂತರ ನಿಮ್ಮ ಕಡೆಯಿಂದ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದಕಾರಣ ಇವುಗಳನ್ನೆಲ್ಲಾ ಸರ್ಕಾರ ತೆಗೆದುಕೊಳ್ಳಬೇಕು ಕೂಡಲೇ ಮುಳುಗಡೆ ಪ್ರದೇಶದ ಜನರಿಗೆ ಅನುಕೂಲತೆಗಳನ್ನು ಮಾಡಿಕೊಟ್ಟು ಇರಿಗೇಷನ್‌ಗೆ ಹೆಚ್ಚಿಗೆ ಹಣ ಕೊಟ್ಟು ಈ ಕೆಲಸಗಳನ್ನು ಮುಗಿಸಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಸಂತಾಪ ಸೂಚನೆ

ಬೆಂಗಳೂರಿನಲ್ಲಿ ವಾಯುಪಡೆಗೆ ಸೇರಿದ ವಿಮಾನ ಅಪಘಾತದಲ್ಲಿ ಮಡಿದವರ ಬಗ್ಗೆ

+ಶ್ರೀ ಎಸ್. ಬಂಗಾರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಅಪಘಾತದ ಬಗ್ಗೆ ವಿಷ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು: ಹೇಳಿ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರಿನಲ್ಲಿ ಮತ್ತೊಂದು ವಿಮಾನ ಅಪಘಾತ ದುರಂತ ಈ ದಿನ ಬೆಳಿಗ್ಗೆ ಸುಮಾರು 8 ಘಂಟೆ 10 ನಿಮಿಷದ ಹೊತ್ತಿನಲ್ಲಿ ಯಲಹಂಕ ಏರ್‌ಫೋರ್ಸ್‌ಗೆ ಸೇರಿರತಕ್ಕ ವಿಮಾನ ನಿಲ್ದಾಣದಲ್ಲಿ ಇದು ಆಗಿದೆ. ಈ ವಿಚಾರ ಗೊತ್ತಾದ ಕೂಡಲೇ ಸದನದಲ್ಲಿ ತಮ್ಮ ಅಪ್ಪಣೆ ಪಡೆದು ನಾನು ವಿರೋಧಪಕ್ಷದ ನಾಯಕರಾದ ಶ್ರೀ ಮಾನ್ ಚಂದ್ರೇಗೌಡರು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮತ್ತು ಶಾಸಕ ಮಿತ್ರರಾದ ಮಾಲೀಕಯ್ಯ ಗುತ್ತೇದಾರ್ ಅವರು ಗೃಹಸಚಿವರಾದ ಧರ್ಮಸಿಂಗ್ ನಾವೆಲ್ಲ ಸೇರಿ ಅಲ್ಲಿಗೆ ಹೋಗಿ ಬಂದೆವು ಹೋದಾಗ ವಿವರಗಳನ್ನು ಕೂಡ ಪಡೆದೆವು. ಬೆಳಿಗ್ಗೆ ಮೇಲಕ್ಕೆ ಹಾರಿ ಏರ್ ಬೋರ್ನ್ ಆಗಿ ಅರ್ಧ ನಿಮಿಷವೂ ಕಳೆದಿಲ್ಲ ಆವ್ರೋ ಏರ್‌ಕ್ರಾಫ್ಟ್ ಡಬ್ಬಲ್ ಎಂಜಿನ್ ಅದು ರನ್‌ವೇ ಇದೆಯಲ್ಲ ಅದರಿಂದ ಬಲಗಡೆ ಭಾಗದಲ್ಲಿ ನೂರಾರು ಅಡಿ ದೂರದಲ್ಲಿ ಬಿದ್ದಿದೆ. ಸಂಪೂರ್ಣವಾಗಿ ಭಸ್ಮವಾಗಿದೆ ಕಾರಣಗಳು ಏನು ಎಂಬುದು ತನಿಖೆಗೆ ಸಂಬಂಧಪಟ್ಟಿರತಕ್ಕ ವಿಚಾರ. ಏರ್‌ಫೋರ್ಸ್ ಇಲಾಖೆಗೆ ಸಂಬಂಧಪಟ್ಟ ವಿಚಾರ. ಒಟ್ಟು 28 ಜನ ಮೃತರಾಗಿರುವುದು. ಅದರ ಪಟ್ಟಿಯೂ ಕೂಡ ಅಲ್ಲಿರತಕ್ಕ ಏರ್‌ಫೋರ್ಸ್ ಅಧಿಕಾರಿಗಳು ತೋರಿಸಿದ್ದಾರೆ. ಮೂರು ಜನ ಆಫೀಸರ್ಸ್ ಕೇಡಾರ್‌ನಲ್ಲಿ ಇರತಕ್ಕವರು ಇನ್ನು 25 ಜನ 24 ವರ್ಷದ ಮಕ್ಕಳು ಟೆಕ್ನಿಕಲ್ ಗ್ರಾಜುಯೇಟ್ಸ್. ನಾನು ವಿವರಗಳನ್ನು ನೋಡುವುದಕ್ಕೆ ಹೋಗಲಿಲ್ಲ. ಅವರೆಲ್ಲಾ ಟ್ರೈನೀ ಗ್ರಾಜುಯೇಟ್ ಆಫೀಸರ್ಸ್ ಇದ್ದಾರೆ. ಅಫಘಾತ ಆದತಕ್ಷಣ ಬೆಂಕಿ ಬಿದ್ದು ಬಲಗಡೆ ರೆಕ್ಕೆ ಕಿತ್ತುಕೊಂಡು ಹೋಗಿದೆ. ಮುಂದುಗಡೆ ಏನೂ ಉಳಿದಿಲ್ಲ. ಮುಂದುಗಡೆ ಚೂಪಾಗಿರತಕ್ಕದ್ದು ಬಿಟ್ಟರೆ ಎಲ್ಲಾ ಭಸ್ಮವಾಗಿದೆ. ತಕ್ಷಣ ಏರ್‌ಪೋರ್ಸ್‌ನ ಅಗ್ನಿಶಾಮಕ ದಳದವರು ಮತ್ತು ನಮ್ಮ ರಾಜ್ಯದ ಅಗ್ನಿಶಾಮಕ ದಳದವರು ಅಲ್ಲಿಗೆ ಹೋಗಿದ್ದಾರೆ. ಅವರು ರಾಜ್ಯ ಸರ್ಕಾರದ ಫೈರ್ ಬ್ರಿಗೇಡ್ ಅಪ್ರಿಷಿಯೇಟ್ ಮಾಡಿದರು.

ಡಿ.ಐ.ಜಿ. ರಘುರಾಮನ್ ಅವರ ನೇತೃತ್ವದಲ್ಲಿ ಅಫಘಾತ ನಡೆದ ಸ್ಥಳಕ್ಕೆ ಹೋಗಿ ಸಂಪೂರ್ಣವಾಗಿ ಏನು ತಕ್ಷಣ ಕಾರ್ಯಕ್ರಮ ಹಾಕಬೇಕು ಡೆಡ್ ಬಾಡೀಸ್ ತೆಗೆಯತಕ್ಕ ವಿಚಾರದಲ್ಲಿ ಅದನ್ನು ಮಾಡಿದ್ದಾರೆ. ಜೊತೆಗೆ ಫೈರ್ ಬ್ರಿಗೇಡ್ ಸಿಬ್ಬಂದಿವರ್ಗದವರು ಎಲ್ಲರೂ ಇನ್ನೂ ಕೂಡ ಅಲ್ಲಿದ್ದರು. ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ.